ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 12 ಸಂ. 11 ನವಂಬರ್ 2015 ರೂ.25

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

**ಅನು: ಚಂಪಾ**

(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಮಾರ್ಚ್ 2009ರ ಸಂಚಿಕೆ)

ಈ ಖಾಲಿ ಹಾಳೆಯ ಮುಂದೆ ಕುಳಿತು ನನ್ನ ಆಲೋಚನೆಗಳಿಗೆ ಪದಗಳನ್ನು ಹುಡುಕತೊಡಗಿದಾಗ ನನಗೆ ಹೆಚ್ಚು ಪದಗಳೇನೂ ಸಿಗಲಿಲ್ಲ. ಜಗತ್ತಿನಲ್ಲೆಡೆ ಇರುವ ಸಾವಿರಾರು ಜನಗಳಿಗೂ ನನಗಿರುವಂಥ ಕನಸುಗಳೇ ಇವೆ ಎಂಬುದನ್ನು ತಿಳಿದು ನನಗೆ ಬಹಳ ಸಂತೋಷ, ಸಂಭ್ರಮ ಉಂಟಾಗಿದೆ. ಸಾವಿರಾರು ಜನರು ಬೆಳಕನ್ನು ಚಾನಲ್ ಮಾಡಲು ಉತ್ಸುಕರಾಗಿದ್ದಾರೆ. ಹಲವರು ಈಗಾಗಲೇ ಚಾನಲ್ ಮಾಡಲು ಆರಂಭಿಸಿದ್ದಾರೆ. ಬೆಳಕಿನಲ್ಲಿ ಪ್ರೀತಿ ಮತ್ತು ಶಾಂತಿಯನ್ನು ಚಾನಲ್ ಮಾಡಬಹುದಾದ ಸಾಧ್ಯತೆಯನ್ನು ಹೊಸದಾಗಿ ಕಂಡುಕೊಂಡವರು ನನ್ನಂತೆಯೇ ಸಂಭ್ರಮಿಸುತ್ತಿದ್ದಾರೆ. ಅವರು ಬೆಳಕನ್ನು ಚಾನಲ್ ಮಾಡಿ ಈ ಭೂಮಿಯನ್ನು ಸೃಷ್ಟಿಯಲ್ಲೇ ಅತ್ಯಂತ ಶಾಂತಿಯುತ ಗ್ರಹವನ್ನಾಗಿ ಮಾಡಲು ತಯಾರಿದ್ದಾರೆ. ಸಹಜವಾಗಿ, ಅದನ್ನು ಕೆಲವರು ಒಪ್ಪುವುದಿಲ್ಲ. ಅವರಿಗೆ ನಾವು ಬೆಳಕನ್ನು ಕಳುಹಿಸುತ್ತೇವೆ. ಅವರೂ ನಮ್ಮ ಸಹೋದರ ಸಹೋದರಿಯರೇ.

2009ರ ಫೆಬ್ರುವರಿ 26ರಂದು ಸಾವಿರಾರು ಜನರು ಬೆಳಕನ್ನು ಚಾನಲ್ ಮಾಡಿ, ವಿಶಿಷ್ಟವಾದ ಮೌನ ವಿಶ್ವ ಸಂಚಲನಕ್ಕೆ ಚಾಲನೆ ನೀಡಿ, ಪ್ರತಿದಿನ ಏಳು ನಿಮಿಷಗಳ ಕಾಲ ಬೆಳಕನ್ನು ಚಾನಲ್ ಮಾಡುವ ಮೂಲಕ ಈ ಸಂಚಲನವನ್ನು ಹರಡುವುದು ಹಾಗೂ ಸಶಕ್ತಗೊಳಿಸುವುದು ಕೇವಲ ಆರಂಭವಷ್ಟೇ. ಚಟುವಟಿಕೆಯುಳ್ಳ ಬೆಳಕಿನ ಜಾಲವನ್ನು ಹೊಂದುವುದು ಮುಂದಿನ ಹೆಜ್ಜೆ. ನಮ್ಮ ಅನುಭವಗಳನ್ನು, ಪ್ರೀತಿಯನ್ನು ಹಂಚಿಕೊಂಡು ಭೂಮಿಗೆ ಬೆಳಕು ಹರಿಯುವಂತೆ ಮಾಡಿ ಈ ಸುಂದರ ವಸುಂಧರೆಯಲ್ಲಿನ ಜೀವನವನ್ನು ಪರಿವರ್ತಿಸುವುದಕ್ಕೆ ನಾವು ಪರಸ್ಪರರೊಂದಿಗೆ ಕಾರ್ಯ ನಡೆಸಲು ಸಮಾನ ವೇದಿಕೆಯನ್ನು ಹೊಂದಬೇಕಾಗುತ್ತದೆ.

ಈಗ ಹಲವಾರು ತಂಡಗಳು ಬೆಳಕನ್ನು ಚಾನಲ್ ಮಾಡುತ್ತಿವೆ ಎಂದು ನನಗೆ ತಿಳಿದಿದೆ. ನಾವು ಬೆಳಕಿನಲ್ಲಿ ಒಗ್ಗಟ್ಟಾಗಬೇಕು. ಹೀಗೆ ಸಂಘಟಿಸುವುದರಿಂದ ಬೆಳಕಿನ ಬೃಹತ್ ಕ್ಷೇತ್ರ ಸ್ಥಾಪಿತವಾಗುತ್ತದೆ. ಆಗ ಬೆಳಕು ಕೆಲಸ ಮಾಡಲಾರಂಭಿಸುತ್ತದೆ.

ಬೆಳಕು ಒಂದು ದಿವ್ಯ ಚೇತನ ಎಂದು ನಮಗೆಲ್ಲರಿಗೂ ತಿಳಿದಿದೆ. ಅದಕ್ಕೆ ತನ್ನದೇ ಆದ ಬುದ್ಧಿ ಹಾಗೂ ವಿವೇಕಗಳಿವೆ. ಯಾವುದೇ ಘೋಷಣೆ, ಬೋಧನೆಗಳಿಲ್ಲದೆ ಮೌನವಾಗಿ ಈ ಭೂಮಿಯನ್ನು ಪ್ರೀತಿ ಮತ್ತು ಶಾಂತಿ ತುಂಬಿದ ನೆಲೆಯನ್ನಾಗಿ ಪರಿವರ್ತಿಸಬೇಕೆಂಬ ನಮ್ಮ ಇಂಗಿತ ಅದಕ್ಕೆ ತಿಳಿದೇ ಇರುತ್ತದೆ. ತಮ್ಮ ಈ ಕನಸನ್ನು ನನಸಾಗಿಸಿಕೊಳ್ಳಲು ಬೆಳಕು ಪ್ರತಿಯೊಬ್ಬರಿಗೂ ನೆರವಾಗುತ್ತದೆ.

ಇವು ಪೊಳ್ಳು ಮಾತುಗಳಲ್ಲ, ನಿರರ್ಥಕ ಕನಸುಗಳಲ್ಲ. ಇದು ಭವಿಷ್ಯದ ಹುಟ್ಟು. ಬೆಳಕಿನಿಂದ ಬದಲಾವಣೆ ಉಂಟಾಗುತ್ತಿರುವುದು ಇದೇ ಮೊದಲಲ್ಲ. ಈ ಹಿಂದೆ ಹಲವಾರು ಬಾರಿ ಆಗಿದೆ. ನಮ್ಮ ಇತಿಹಾಸ ಅದನ್ನು ದಾಖಲೆ ಮಾಡದೇ ಇರಬಹುದು. ಏನೇ ಆದರೂ ನಮ್ಮ ಇತಿಹಾಸವು ಕಾಲವೆಂಬ ಮಹಾಪುಸ್ತಕದಲ್ಲಿ ಕೇವಲ ಒಂದು ಪುಟ ಮಾತ್ರ. ಆ ಮಹಾ ಪುಸ್ತಕದಲ್ಲಿ ಹಲವಾರು ಅಜ್ಞಾತ ಬರಹಗಳಿರುವ ಪುಟಗಳಿವೆ. ನಾವು ಬರೆಯುವುದು ಭವಿಷ್ಯದಲ್ಲಿ.

ನನಗೆ ಹೇಳಲು ಹಲವಾರು ವಿಷಯಗಳಿವೆ, ತೆರೆದಿಡಲು ಹಲವಾರು ಕಲ್ಪನೆಗಳಿವೆ. ಆದರೆ ಇತರರ ಮಾತುಗಳನ್ನು ಕೇಳಿಸಿಕೊಳ್ಳಲು, ಅವರ ಕಲ್ಪನೆಗಳನ್ನು ಹಂಚಿಕೊಂಡು, ಅವರ ಕೈಗಳಿಂದ ಶಕ್ತಿಯನ್ನು ಪಡೆದುಕೊಳ್ಳಲು ನಾನು ವಿನೀತನಾಗಿ ಕಾಯುತ್ತೇನೆ.

ನಾವು ಒಂದು ಪ್ರಕ್ರಿಯೆಯನ್ನು, ಒಂದು ಸಂಚಲನವನ್ನು ಆರಂಭಿಸಲಷ್ಟೇ ಸಾಧ್ಯ. ಇತರರ ಸಹಯೋಗ, ಪ್ರೀತಿ ಇಲ್ಲದೆ ಅದು ಮುಂದುವರಿಯಲು ಸಾಧ್ಯವಿಲ್ಲ. ಈ ಜಗತ್ತು ಇಂತಹ ಸಂಚಲನೆಗಾಗಿ ಕಾಯುತ್ತಿದೆ. ನಾವು ಜಗತ್ತನ್ನು ಬದಲಿಸೋಣ. ಪ್ರತಿದಿನ ಬೆಳಕನ್ನು ಚಾನಲ್ ಮಾಡೋಣ.

ಮತ್ತೊಂದು ಯುಗಾದಿ (ಹೊಸ ವರ್ಷ) ಹತ್ತಿರ ಬರುತ್ತಿದೆ. ಭವಿಷ್ಯವನ್ನು ರೂಪಿಸಲು ಮತ್ತೊಂದು ಅವಕಾಶ, ಮತ್ತೊಂದು ಸಾಹಸ.

ಹಳೆಯ ವ್ಯವಸ್ಥೆಗಳು ನಮ್ಮ ನಿರೀಕ್ಷೆಗಿಂತ ಮೊದಲೇ ಪತನಹೊಂದುವುದರಿಂದಾಗಿ, ಈ ಹೊಸವರ್ಷವು ಹೊಸ ವ್ಯವಸ್ಥೆಗಳ ಹುಟ್ಟಿಗೆ ಸಾಕ್ಷಿಯಾಗಲಿದೆ. ನಾವು ಹತಾಶರಾಗಬಾರದು. ಒಂದು ಮಹಾನ್ ಬುದ್ಧಿ, ದಿವ್ಯ ಬೆಳಕು ನಮ್ಮನ್ನು ಪಾರುಮಾಡುತ್ತದೆ. ಭವಿಷ್ಯವು ಬೆಳಕಿನಿಂದ ತುಂಬಿ ಭವ್ಯವಾಗಿರುತ್ತದೆ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.
✆ (080) 2846 5280, 99000 75280 (ಬೆಳಗ್ಗೆ 10ರಿಂದ ಸಂಜೆ 5)
ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



"15ನೇ ಮೇ 2015ರಂದು, ನಮ್ಮ ಕಾರ್ಯಕರ್ತರೊಬ್ಬರು ಸ್ನೇಹಿತರ ಮನೆಯಲ್ಲಿ ಆಯೋಜಿಸಿದ್ದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಬೆಳಗಾವಿಯ ತಲಕ್‌ವಾಡಿಯಲ್ಲಿನ ನಿವಾಸಿಗಳು ಬೆಳಕನ್ನು ಚಾನಲ್ ಮಾಡುತ್ತಿರುವುದು."

### ಸುದ್ದಿ-ಸೂಚನೆ

- 29-11-2015 ರಂದು ತಪೋನಗರದಲ್ಲಿ ಗುರೂಜಿಯವರ ಮಹಾಸಮಾಧಿ ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರನ್ನು ದಿನಾಂಕ 27-11-2015 ರೊಳಗೆ ಮಾನಸ ಕಚೇರಿಯಲ್ಲಿ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.
- 2016ನೇ ಇಸವಿಯ ಡೆಸ್ಕ್ ಕ್ಯಾಲೆಂಡರ್ ಅನ್ನು 29-11-2015 ರ ಕಾರ್ಯಕ್ರಮದ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಗುವುದು. ಆಸಕ್ತ ಸಾಧಕರು ತಮ್ಮ ಪ್ರತಿಗಳಿಗಾಗಿ ಮಾನಸ ಆಫೀಸಿನಲ್ಲಿ ದಿನಾಂಕ 15-11-2015 ರೊಳಗೆ ರಿಜಿಸ್ಟರ್ ಮಾಡಬಹುದು.
- 2016ರಲ್ಲಿ ಪ್ರಾರಂಭವಾಗುವ ಶಂಬಲ ಗ್ರೂಪ್‌ನ ಹೊಸ ಬ್ಯಾಚ್‌ಗೆ ಸೇರಬಯಸುವ ಸಾಧಕರು, 31-12-2015 ರೊಳಗೆ ಮಾನಸ ಆಫೀಸಿನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಬೇಕಾಗಿ ವಿನಂತಿ. ದೂರಕಲಿಕೆಯ ಸಾಧಕರು ಕೂಡ ಸೇರಬಹುದು. ಈಗಿನ ಶಂಬಲ ಗ್ರೂಪ್ ಸಾಧಕರು ಕೂಡಾ ತಮ್ಮ ನೋಂದಣಿಯನ್ನು ನವೀಕರಿಸಿಕೊಳ್ಳಲು ತಮ್ಮ ಹೆಸರನ್ನು 31-12-2015 ರೊಳಗೆ ರಿಜಿಸ್ಟರ್ ಮಾಡಬೇಕಾಗಿ ವಿನಂತಿ.

### ಆನೇಕಲ್ ಕಾರ್ಯಕ್ರಮ

**ದಿನಾಂಕ 23-11-2015, ಸೋಮವಾರದಂದು ಬೆಳಿಗ್ಗೆ 11.30ಕ್ಕೆ ಆನೇಕಲ್‌ನಲ್ಲಿರುವ ನಮ್ಮ 'ಸಪ್ತರ್ಷಿ ಧ್ಯಾನ ಕೇಂದ್ರ'ದಲ್ಲಿ ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.**

ಗುರೂಜಿಯವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ವೆಬ್‌ಸೈಟ್‌ಗೆ ಭೇಟಿನೀಡಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 04 | ಬುಧ | ಕೃಷ್ಣ ಅಷ್ಟಮಿ |
| 09 | ಸೋಮ | ಮಾಸ ಶಿವರಾತ್ರಿ |
| 10 | ಮಂಗಳ | ನರಕ ಚತುರ್ದಶಿ |
| 11 | ಬುಧ | ಅಮಾವಾಸ್ಯೆ, ದೀಪಾವಳಿ, ಮಹಾಲಕ್ಷ್ಮಿ ಪೂಜೆ |
| 12 | ಗುರು | ಬಲಿ ಪಾಡ್ಯಮಿ |
| 19 | ಗುರು | ಶುಕ್ಲ ಅಷ್ಟಮಿ |
| 21 | ಶನಿ | ಶುಕ್ಲ ದಶಮಿ |
| 23 | ಸೋಮ | ಗುರೂಜಿಯವರ ಮಹಾಸಮಾಧಿ ದಿನ |
| 25 | ಬುಧ | ಪೂರ್ಣಿಮೆ ಶಿವ ದೀಪ |
| 26 | ಗುರು | ವಿಷ್ಣು ದೀಪ |
| 29 | ಭಾನು | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು:ಉಪನ್ಯಾಸಗಳು: | ಬೆಳಿಗ್ಗೆ 11-12 |
| ಲೈಟ್ ಚಾನಲಿಂಗ್: | ಮಧ್ಯಾಹ್ನ 12-1 |
| 08-11-2015 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ |
| 15-11-2015 | ಮಧ್ಯಾಹ್ನ 2ಕ್ಕೆ ರಾ ಗ್ರೂಪ್ ಸಂಧಿಸುತ್ತದೆ |
| 29-11-2015 | ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ |

### ಗುರೂಜಿಯವರ ಮಹಾಸಮಾಧಿ ಕಾರ್ಯಕ್ರಮ ಭಾನುವಾರ, 29-11-2015

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ |
| | ಭಾಷಣಗಳು |
| | ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಲೈಟ್ ಚಾನಲಿಂಗ್ ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ನಾನು ಲೈಟ್ ಚಾನಲ್ ಮಾಡುವಾಗ, ನನ್ನೆಲ್ಲಾ ಸಮಸ್ಯೆಗಳು ಮರೆತು ಹೋಗುತ್ತವೆ. ಚಾನಲಿಂಗ್ ಮಾಡಿದ ನಂತರ ನನ್ನ ಸಮಸ್ಯೆಗಳನ್ನು ನಿಭಾಯಿಸಲು ನನ್ನಲ್ಲಿ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ.

– ಶ್ರೀಮತಿ ವತ್ಸಲಾ, ಶಿಕ್ಷಕಿ, ಲಿಟಲ್ ಏಂಜೆಲ್ಸ್ ಇಂಗ್ಲೀಷ್ ಶಾಲೆ, ಬೆಂಗಳೂರು

ನನಗೆ ಎರಡು ದಿನಗಳಿಂದ ತಲೆನೋವು ಇತ್ತು, ಆದರೆ ಲೈಟ್ ಚಾನಲಿಂಗ್ ಸೆಷನ್ ನಂತರ ಅದು ಕಡಿಮೆಯಾಯಿತು. ನನಗೆ ಇದರಿಂದ ಸಂತೋಷವಾಯಿತು. ಆನಂತರ ರಾತ್ರಿಯಲ್ಲಿ ನನಗೆ ತೀವ್ರವಾದ ತಲೆನೋವುಂಟಾದಾಗ, ನಾನು ಅದೇ ತಂತ್ರವನ್ನು ಅಭ್ಯಾಸ ಮಾಡಿದೆ ಮತ್ತು ನನ್ನ ನೋವು ನಿವಾರಣೆಯಾಯಿತು. ಈಗ ನನ್ನಲ್ಲಿ ಯಾವುದೇ ನೋವು ಕಾಣಿಸಿಕೊಂಡಾಗಲೆಲ್ಲ ನಾನು ಈ ತಂತ್ರವನ್ನು ಅಭ್ಯಾಸ ಮಾಡಬೇಕೆಂದು ನನಗೆ ತಿಳಿದಿದೆ.

– ಶ್ರೀಮತಿ ಬೃಂದಾ, ಶಿಕ್ಷಕಿ, ಭಾರತಿಯ ವಿದ್ಯಾ ನಿಕೇತನ ಪ್ರೌಢ ಶಾಲೆ, ದೇವಸಂದ್ರ

ಇತ್ತೀಚೆಗೆ ಶಾಲೆಗಳಲ್ಲಿ ನಡೆಸುವ ಲೈಟ್ ಚಾನಲಿಂಗ್ ಸೆಷನ್‌ಗಳು ಅತ್ಯಂತ ಉತ್ತಮವಾಗಿದೆ. ಬೆಳಕು ಎಲ್ಲವನ್ನೂ ನೋಡಿಕೊಳ್ಳುತ್ತಿದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಒಮ್ಮೆ ಸೆಷನ್‌ನ ನಂತರ ಓರ್ವ ಶಿಕ್ಷಕಿ ನನ್ನಲ್ಲಿ ಬೆಳಕನ್ನು ಕಂಡಿದ್ದಾಗಿ ತಿಳಿಸಿದಳು. ಇದೊಂದು ಬೆಳಕಿನ ಅನುಗ್ರಹ ಮತ್ತು ಆಶೀರ್ವಾದವೆಂದು ನಾನವಳಿಗೆ ತಿಳಿಸಿದೆ.

– ಪದ್ಮಿನಿ ಎಸ್, ಕಾರ್ಯಕರ್ತೆ

ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದ ನಂತರ, ನಾನು ಸಣ್ಣಪುಟ್ಟ ಮತ್ತು ಕ್ಷುಲ್ಲಕ ವಿಷಯಗಳಿಗೆ ಪ್ರತಿಕ್ರಿಯಿಸುವುದನ್ನು ನಿಲ್ಲಿಸಿದ್ದೇನೆ.

– ಪಾಖಿ ರಾಜ್‌ಕುಮಾರ್, 9ನೇ ತರಗತಿ, ಟೈನಿ ಟಾಟ್ಸ್ ಸೀನಿಯರ್ ಸೆಕೆಂಡರಿ ಶಾಲೆ, ಬನ್ಸ್ವಾರಾ

ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದ ನಂತರ, ನನ್ನ ಸುತ್ತಮುತ್ತ ನಡೆಯುವ ಬಹುತೇಕ ಎಲ್ಲ ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ. ನನಗೆ ಕಲಿಯಲು ಆಸಕ್ತಿಯುಂಟಾಗಿದೆ. ನಾನು ಪ್ರತಿಯೊಂದು ಕೆಲಸದಲ್ಲೂ ಸಂತೋಷವನ್ನು ಅನುಭವಿಸುತ್ತೇನೆ.

– ಹಿತಾರ್ಥ್ ಪಾಠಕ್, 9ನೇ ತರಗತಿ, ಟೈನಿ ಟಾಟ್ಸ್ ಸೀನಿಯರ್ ಸೆಕೆಂಡರಿ ಶಾಲೆ, ಬನ್ಸ್ವಾರಾ

ಬೆಳಕನ್ನು ಚಾನಲ್ ಮಾಡುವಾಗ ನಾನು ಬೆಳಕಿನ ಸಾಗರದಲ್ಲಿ ತೇಲುತ್ತಿರುವ ಅನುಭವವಾಯಿತು.

– ಅಂಬ್ರುನಿ ಎ., 4ನೇ ತರಗತಿ, ಆರ್.ಎಂ.ಎಸ್. ಇಂಟರ್‌ನ್ಯಾಶನಲ್ ಶಾಲೆ, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ವರ್ಷಾ ದೀಪಕ್**

2010 ರಲ್ಲಿ, ನಾನು ಗುರೂಜಿಯವರನ್ನು ತಪೋನಗರ ನಿವಾಸಿಗಳ ನಡುವಿನ ಏಕತೆಯ ಮಟ್ಟದ ಬಗ್ಗೆ ಕೇಳಿದ್ದೆ. ಅದರಲ್ಲೂ ನಿರ್ದಿಷ್ಟವಾಗಿ ಗರಿಷ್ಠ ಪ್ರಮಾಣ 10 ಇರುವ ಅಳತೆ ಪಟ್ಟಿಯ 1 ರಿಂದ 10 ರವರೆಗಿನ ಅಳತೆಗಳ ಮೂಲಕ ತಿಳಿಸಲು ಕೇಳಿಕೊಂಡಿದ್ದೆ. ಆಗ ಗುರೂಜಿಯವರು ಅದು 5ರ ಮಟ್ಟದಲ್ಲಿದೆ ಎಂದಿದ್ದರು. ಅದರ ಮುಂದಿನ ವರ್ಷ ಅದೇ ಪ್ರಶ್ನೆಗೆ ಅವರು ಉತ್ತರಿಸುತ್ತಾ, ಏಕತೆಯ ಮಟ್ಟವು 7ಕ್ಕೆ ಹೆಚ್ಚಿದೆ ಎಂದು ತಿಳಿಸಿದರು. ಮರುವರ್ಷವೇ ಅವರು ಈ ಭೌತಿಕ ಜಗತ್ತಿನಿಂದ ಮರೆಯಾದರು. ಅವರ ಕೊನೆಯ ವಾರಗಳಲ್ಲಿ ತಪೋನಗರಿಗರ ನಡುವಿನ ಏಕತೆಗೆ ಅಖಂಡನೀಯ ಪ್ರಮಾಣವನ್ನು ನೀಡಿದರು.

ಅಕ್ಟೋಬರ್ 2012ರಲ್ಲಿ, ಗುರೂಜಿಯವರ ಆರೋಗ್ಯವು ಕ್ಯಾನ್ಸರ್‌ನಿಂದಾಗಿ ತೀರಾ ಕೆಟ್ಟಿದೆ ಎಂದು ಭಾನುವಾರದ ತರಗತಿಯಲ್ಲಿ ತಿಳಿಸಿದರು. ನನಗಿದರ ಬಗ್ಗೆ ಕೆಲವು ತಿಂಗಳ ಹಿಂದೆಯೇ, ಅದು ಪತ್ತೆಯಾದಾಗಿನಿಂದ ತಿಳಿದಿತ್ತು. ಒಂದು ತಪ್ಪಿಸಿಕೊಳ್ಳಲಾಗದಂತಹ ಸಂದರ್ಭವು ಕಣ್ಣೆದುರಿಗಿದ್ದಾಗ, ನನ್ನ ಎಲ್ಲಾ ಸಂಭವನೀಯ ಪ್ರಾರ್ಥನೆಗಳು ಮತ್ತು ಕಂಬನಿಗಳೆಲ್ಲಾ ಬರಿದಾದಂತೆ ಅನಿಸಿದಾಗ, ನಾನು ನಿರಾಶೆಯ ಅಗಾಧ ಕೂಪದಲ್ಲಿದ್ದೆ. ಭಾನುವಾರದ ತರಗತಿಯಲ್ಲಿ ಅದರ ಬಗ್ಗೆ ಪ್ರಕಟಿಸಿದ ಕ್ಷಣದಿಂದ, ನನ್ನ ಮೇಲೆ ಹತ್ತು ಟನ್ನಿನಷ್ಟು ಭಾರದ ದುಃಖವನ್ನು ಹೇರಿದ ಅನುಭವವಾಯಿತು. ಯಾವುದೇ ಕ್ಷಣದಲ್ಲಿ ಒಡೆದುಹೋಗುವಂತಿರುವ ತೆಳುವಾದ ಭರವಸೆಯ ಅಣೆಕಟ್ಟು ಕಣ್ಣೀರಿನ ಪ್ರವಾಹವನ್ನು ತಡೆಹಿಡಿದಂತೆ ಅನಿಸುತ್ತಿತ್ತು. ನಾನು ಕೆಫೆಯೊಂದಕ್ಕೆ ಹೋದಾಗ ಅಲ್ಲಿದ್ದ ಅಪರಿಚಿತರ ಮಧ್ಯೆಯೂ ತೀವ್ರ ದುಃಖದ ಅವರ್ಣನೀಯ ಹೊರೆಯು ನನ್ನನ್ನು ಕುಗ್ಗಿಸಿತ್ತು. ಅಲ್ಲಿಯೇ ಅಪರಿಚಿತರ ನಡುವೆ ಅತ್ತು ಬೊಬ್ಬಿಡಬೇಕೆಂದು ಅನಿಸುತ್ತಿತ್ತು. ನನ್ನ ಬುದ್ಧಿ ಹೇಗೆ ಸ್ತಿಮಿತದಲ್ಲಿತ್ತು ಎಂದು ನನಗೆ ತಿಳಿದಿಲ್ಲ. ಮರುದಿನ ಈ ಸಹಿಸಲಾಗದ ಭಾವನೆಯು ತನ್ನ ಹಿಡಿತವನ್ನು ಸಡಿಲಿಸಿತು.

ಸನ್ನಿಹಿತವಾಗುತ್ತಿದ್ದ ಗುರೂಜಿಯವರ ನಿರ್ಗಮನದ ಬಗ್ಗೆ ಬಹಳ ಹಿಂದೆಯೇ ತಿಳಿದಿದ್ದರೂ ಕೂಡಾ, ಅಂದು ಭಾನುವಾರದ ತರಗತಿಯಲ್ಲಿ ಈ ವಿಷಯ ತಿಳಿಸಿದ ನಂತರ ತಪೋನಗರ ನಿವಾಸಿಗಳ ಹಾಗೂ ಅನಿವಾಸಿಗಳ ಸಂಚಿತ ದುಃಖವು ನನ್ನಲ್ಲಿ ಆಳವಾದ ಅಸಹನೀಯ ವೇದನೆಯನ್ನುಂಟುಮಾಡಿದುದರ ಬಗ್ಗೆ ನನಗೆ ನಂತರ ಅರಿವಾಯಿತು. ನಾವೆಲ್ಲ ತುಂಬಾ ಪ್ರೀತಿಸುತ್ತಿದ್ದ ವ್ಯಕ್ತಿಗಾಗಿ ಇದ್ದ ದುಃಖವು ನಮ್ಮ ಏಕತೆಯಲ್ಲಿ ಹಂಚಿಹೋಯಿತು. ಮೂರು ವರ್ಷ ಕಳೆಯಿತು, ಗುರೂಜಿಯವರನ್ನು ಪ್ರೀತಿಸುವ ಎಲ್ಲರ ನಡುವೆಯೂ, ಮಾನವಸಹಜ ಕುಂದುಕೊರತೆಗಳೆಲ್ಲದರ ಹೊರತಾಗಿಯೂ, ಅದೃಶ್ಯ ಏಕತೆಯು ಅಸ್ತಿತ್ವದಲ್ಲಿದೆ ಎಂದು ನಾನು ಖಚಿತವಾಗಿ ಹೇಳಬಲ್ಲೆ. ■

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ನಾನು 4ನೇ ತರಗತಿಯಲ್ಲಿ ಓದುತ್ತಿದ್ದಾಗಿನ ಒಂದು ಘಟನೆ ನೆನಪಾಗುತ್ತಿದೆ. ಒಮ್ಮೆ ನನ್ನ ಶಿಕ್ಷಕಿಯವರು ಇದ್ದಕ್ಕಿದ್ದಂತೆ ಕಾಗೆಯ ಬಗ್ಗೆ ಬರೆಯಲು ಹೇಳಿದರು. ಅದು ನಮ್ಮ ಪುಸ್ತಕದಲ್ಲಿರಲಿಲ್ಲವಾದ್ದರಿಂದ ನನಗೆ ಏನು ಬರೆಯಬೇಕೆಂದು ತಿಳಿಯಲಿಲ್ಲ. ಆಕೆ ನನ್ನನ್ನು ತರಗತಿಯ ಆಚೆ ಕರೆದುಕೊಂಡು ಹೋಗಿ ಅಲ್ಲಿ ಕೂರಿಸಿದರು. ನನ್ನ ಕೈಗೆ ಪುಸ್ತಕವೊಂದನ್ನು ಕೊಟ್ಟು ಅದರಿಂದ ನಕಲು ಮಾಡಲು ಹೇಳಿದರು. 'ಅದು ಸರಿಯಲ್ಲ, ನಾನು ಹೇಗೆ ನಕಲು ಮಾಡಲಿ?' ಎಂದು ದೊಡ್ಡ ಮನುಷ್ಯನಂತೆ ಧೈರ್ಯವಾಗಿ ಕೇಳಿದೆ! ಖಾಲಿಯಿದ್ದ ಸ್ಲೇಟನ್ನು ನೋಡಿ, ನಾನೇಕೆ ನಕಲು ಮಾಡಲಿಲ್ಲವೆಂದು ಕೇಳಿದರು. "ಅದು ಸರಿಯಲ್ಲ, ನಾನು ಹೇಗೆ ನಕಲು ಮಾಡಲಿ," ಎಂದು ಕೇಳಿದೆ. ಆಕೆ ನನಗೆ ಬೈದರು ಮತ್ತು ಕೆನ್ನೆಗೆ ಹೊಡೆದರು. ಆದರೆ, ಖಾಲಿ ಸ್ಲೇಟಿನ ಮೇಲೆ 10 ಅಂಕಗಳಿಗೆ 7 ಅಂಕಗಳನ್ನು ನೀಡಿದರು!

ಇದಕ್ಕೆ ಕಾರಣ ನಮ್ಮ ತಂದೆಯವರು, ಎಂದು ಗರ್ವದಿಂದ ಹೇಳಬಲ್ಲೆ. ಅವರು ಒಮ್ಮೆ ಕೂಡ ಸುಳ್ಳು ಹೇಳಿರಲಿಲ್ಲ. ಈಗಿನ ಬೆಲೆಯಲ್ಲಿ ಒಂದು ಕೋಟಿ ಬೆಲೆಬಾಳುವ ಆಸ್ತಿಯನ್ನು ನಾವು ಕಳೆದುಕೊಂಡಿದ್ದೆವು. ಜನರು ಅವರಿಗೆ ಮೋಸಮಾಡಿದರು ಮತ್ತು ನಾವು ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಆದರೆ ನಾವೆಂದಿಗೂ ಯಾರನ್ನೂ ದೂರಲಿಲ್ಲ ಅಥವಾ ಗೊಣಗಲಿಲ್ಲ. ಅದರ ಬಗ್ಗೆ ತಮಾಷೆಮಾಡುತ್ತಾ ಹಗುರವಾಗಿ ತೆಗೆದುಕೊಂಡೆವು. ಈ ನೆನಪುಗಳು ನನಗೆ ಸಂತೋಷವನ್ನುಂಟುಮಾಡುತ್ತವೆ ಅಥವಾ ಕೊನೆಯ ಪಕ್ಷ ನಗು ತರಿಸುತ್ತವೆ. ಅದರ ಬಗ್ಗೆ ಸಂತೋಷವಿದೆ.

ಪ್ರಾರ್ಥನೆ ಒಂದು ಸಾಮಾನ್ಯ ಪದ. ಪ್ರಾರ್ಥನೆಯೆಂದರೆ ದೇವರೊಂದಿಗೆ ಮಾತನಾಡುವುದು, ಧ್ಯಾನವೆಂದರೆ ದೇವರಿಗೆ ಕಿವಿಗೊಡುವುದು. ಇದನ್ನು, ಕೆಲವು ಅನುಭವಗಳಾದ ನಂತರ ಈ ರೀತಿಯಾಗಿ ಬದಲಾಯಿಸಿದ್ದೇನೆ– 'ಪ್ರಾರ್ಥನೆಯೆಂದರೆ ಮಾತನಾಡುವುದಲ್ಲ, ದೇವರಲ್ಲಿ ಏನನ್ನಾದರೂ ಕೇಳಿಕೊಳ್ಳುವುದು.' ಸ್ವಲ್ಪ ಸಮಯದ ಹಿಂದೆ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಈ ರೀತಿ ಬರೆಯಲಾಗಿತ್ತು – 'ಪ್ರಾರ್ಥನೆಗೊಂದು ಮಿತಿಯಿದೆ, ನಾವು ಎಲ್ಲವನ್ನೂ ಕೇಳಬಾರದು, ಆಧ್ಯಾತ್ಮಿಕವಾದವುಗಳನ್ನು ಮಾತ್ರ ಕೇಳಬೇಕು. ಮುಕ್ತಿಯನ್ನು ನಾವು ಕೇಳಬೇಕು.' ಅದು ಒಳ್ಳೆಯದೇ, ಅದನ್ನು ಯಾರೂ ವಿರೋಧಿಸುವಂತಿಲ್ಲ. ನನ್ನ ಗುರು, "ನೀವು ಏನನ್ನು ಬೇಕಾದರೂ ಕೇಳಬಹುದು, ಅದಕ್ಕೆ ಕೊನೆಯಿಲ್ಲ, ಎಂದು ಹೇಳಿದ್ದರು. ಒಬ್ಬ ವ್ಯಕ್ತಿಯು ನೋವನ್ನನುಭವಿಸುತ್ತಿದ್ದಾನೆ, ಆರ್ಥಿಕ ಸಂಕಷ್ಟದಲ್ಲಿದ್ದಾನೆ, ಬಹಳ ಅವಮಾನ–ವನ್ನೆದುರಿಸುತ್ತಿದ್ದಾನೆ ಎಂದು ಊಹಿಸಿಕೊಳ್ಳಿ. ಆ ವ್ಯಕ್ತಿಗೆ ಬಹಳ ಸಮಸ್ಯೆಗಳಿವೆ ಎಂದು ನಿಮಗೆ ಅರ್ಥವಾಗುತ್ತದೆ. ಆ ವ್ಯಕ್ತಿಯು ಪ್ರಾರ್ಥಿಸುತ್ತಾನೆ. ಆತನಿಗೆ ಬೇರೇನನ್ನೂ ಕೇಳದೆ ಮುಕ್ತಿಯೊಂದನ್ನೇ ಕೇಳುವುದು ಸುಲಭವಲ್ಲ. ಆತನಿಗೆ ಮುಕ್ತಿಯಲ್ಲಿ ಆಸಕ್ತಿಯಿಲ್ಲ, ಮುಂದಿನ ತಿಂಗಳ ಬಾಡಿಗೆಯನ್ನು ಹೇಗೆ ಕೊಡುವುದು ಎನ್ನುವ ಚಿಂತೆ! ನಮ್ಮ ತಂದೆತಾಯಿಯರಲ್ಲಿ ಕೇಳಿಕೊಳ್ಳುವಂತೆಯೇ ಪ್ರಾರ್ಥನೆಯಲ್ಲಿಯೂ ಯಾವುದೇ ಪೂರ್ವ ನಿರ್ಬಂಧಗಳಿರುವುದಿಲ್ಲ ಎಂದು ಅಮರರವರು ಹೇಳಿದ್ದರು. ನಾವು ಅವರನ್ನು ನಮಗೆ ಬೇಕಾದುದೆಲ್ಲವನ್ನೂ ಕೇಳುತ್ತೇವೆ, ಅದನ್ನವರು ಕೊಡುತ್ತಾರೆ. ಇದು ಬಹು ಮುಖ್ಯ. ನಾವು ಏನನ್ನಾದರೂ ಕೇಳಬಹುದು.

ಪ್ರಾರ್ಥನೆಯ ವಿಷಯದಲ್ಲಿ ನಾನು ಒತ್ತುಕೊಡುವ ಒಂದೇ ಒಂದು ಅಂಶವೆಂದರೆ, ನಾವು ಸಂಕೋಚಪಡದೆ ಏನನ್ನು ಬೇಕಾದರೂ ಕೇಳಬಹುದು, ಆದರೆ ಧ್ಯಾನವನ್ನು ಮಾತ್ರ ನಿಲ್ಲಿಸಬಾರದು.

"ನನ್ನ ಸಮಸ್ಯೆಗಳು ಮುಗಿದ ಕೂಡಲೆ, ಧ್ಯಾನಾಭ್ಯಾಸವನ್ನು ಪ್ರಾರಂಭಿಸುತ್ತೇನೆ" ಎಂದು ಕೆಲವೊಮ್ಮೆ ಜನರು ಹೇಳುತ್ತಾರೆ. ಅವರು ಎಂದಿಗೂ ಪ್ರಾರಂಭಿಸುವುದಿಲ್ಲ, ಏಕೆಂದರೆ ಸಮಸ್ಯೆಗಳು ಎಂದಿಗೂ ಮುಗಿಯುವುದಿಲ್ಲ! ಅತ್ಯಂತ ತೊಂದರೆ ಕೊಡುತ್ತಿರುವ ಅಥವಾ ಅಡಚಣೆಯುಂಟುಮಾಡುತ್ತಿರುವ ಸಮಸ್ಯೆಯನ್ನು ಪರಿಹರಿಸಲು ನಾವು ಕೇಳಿಕೊಳ್ಳಬಹುದು. ದಯಾಪರ ದೇವರು ಅದಕ್ಕೆ ಒಪ್ಪಿಕೊಳ್ಳುತ್ತಾನೆ. ದೊಡ್ಡ ಸಮಸ್ಯೆಯ ನಿವಾರಣೆಯಾದಾಗ ನಾವು ಧ್ಯಾನಮಾಡುವುದನ್ನು ನಿಲ್ಲಿಸುತ್ತೇವೆ! ಬದಲಾಗಲು ನಾವು ಸಿದ್ಧರಿರುವವರೆಗೂ, ಬೆಳೆಯಲು ನಾವು ಸಿದ್ಧರಿರುವವರೆಗೂ ನಮ್ಮೆಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ. ಒಂದು ಸಮಸ್ಯೆ ಬಗೆಹರಿದ ನಂತರ ನಾವು ಸಾಧನೆಯನ್ನು ನಿಲ್ಲಿಸಿದರೆ, ಆ ಸಮಸ್ಯೆ ನಮ್ಮಲ್ಲಿಗೆ ಹಿಂದಿರುಗಿ ಬರುತ್ತದೆ. ಬೇಕಿದ್ದಲ್ಲಿ ನೀವು ಇದನ್ನು ಗಮನಿಸಬಹುದು ಅಥವಾ ಪರೀಕ್ಷಿಸಬಹುದು. ನಮ್ಮ ಒಳ್ಳೆಯದಕ್ಕಾಗಿ ಮತ್ತು ನಮ್ಮ ಸುರಕ್ಷತೆಗಾಗಿ ಧ್ಯಾನವನ್ನು ಮುಂದುವರೆಸುವುದು ಉತ್ತಮ.

ಬಹಳ ಬಹಳ ಹಿಂದೆ ಮೋಡಗಳಿಂದ ಮುಚ್ಚಿದ್ದ ನಮ್ಮ ಭೂಮಿಯು, ಒಂದು ದಿನ ತೆರೆದುಕೊಂಡಿತು. ನಂತರ ಮಾನವನು ಮೊದಲ ಬಾರಿಗೆ ಆಕಾಶದಲ್ಲಿ ಸೂರ್ಯನನ್ನು ಕಂಡನು. ಅಂದಿನಿಂದ ಆ ದಿನವನ್ನು ಸೂರ್ಯನಾರಾಯಣ ಭಗವಾನರ ಜನ್ಮದಿನವಾಗಿ, ರಥ ಸಪ್ತಮಿಯ ಹೆಸರಿನಲ್ಲಿ ಆಚರಿಸಲಾಗುತ್ತಿದೆಯೆಂದು ನನ್ನ ಗುರುಗಳು ನಮಗೆ ವಿವರಿಸಿದ್ದರು. ಆ ದಿನ ಬೆಳಿಗ್ಗೆ, ಚೈತನ್ಯಗಳನ್ನು ಸಂಗ್ರಹಿಸಿ ಸೂರ್ಯನಾರಾಯಣ ಭಗವಾನರಿಗೆ ಅರ್ಪಿಸುತ್ತೇವೆ. ನಂತರ ಸಪ್ತರ್ಷಿ ಪ್ರಾಣಾಯಾಮವನ್ನು ಅಭ್ಯಾಸ ಮಾಡಿ ಮತ್ತು ಧ್ಯಾನ ಮಾಡಿ. ಇದರಿಂದ ಅನೇಕ ಪ್ರಯೋಜನಗಳಿವೆ.

ಬಹಳ ಹಿಂದೊಮ್ಮೆ ನಾನು ಭೇಟಿಮಾಡಿದ ವ್ಯಕ್ತಿಯೊಬ್ಬರು, 20 ವರ್ಷಗಳಿಂದ ಒಂದು ಮಾರ್ಗವನ್ನು ಅನುಸರಿಸುತ್ತಿದ್ದುದಾಗಿಯೂ ಮತ್ತು ಅನೇಕ ಅಭ್ಯಾಸಗಳನ್ನು ತುಂಬ ನಿಯಮಿತವಾಗಿ ಮತ್ತು ಗಂಭೀರವಾಗಿ ಅಭ್ಯಾಸವಮಾಡುತ್ತಿದ್ದುದಾಗಿಯೂ ತಿಳಿಸಿದ್ದರು. ಅವರು ಮುಂದೆ ನಡೆಯುವುದನ್ನು ಮೊದಲೇ ಹೇಳುತ್ತಿದ್ದರು, ಅದನ್ನು ತಿಳಿದುಕೊಳ್ಳುವುದಕ್ಕಾಗಿ ಜನರು ಅವರಲ್ಲಿಗೆ ಹೋಗುತ್ತಿದ್ದರು. ನಾನು ಯೋಚಿಸಿದೆ, ಇದೇ ರೀತಿ 1000 ವರ್ಷಗಳವರೆಗೆ ಅಭ್ಯಾಸವನ್ನು ಮುಂದುವರಿಸಿದರೆ, ನಾವು ಇನ್ನೂ ಹೆಚ್ಚಿನ ಸಿದ್ಧಿಗಳನ್ನು ಪಡೆಯುತ್ತೇವೆ. ಆಗ ಮುಂದೆ ಆಗುವುದನ್ನು ಇನ್ನೂ ಹೆಚ್ಚು ತಿಳಿಯಬಹುದು. ಉದಾಹರಣೆಗೆ ಈ ಭೂಮಿಯ ಭವಿಷ್ಯ, ಗ್ಯಾಲಕ್ಸಿಯ ಭವಿಷ್ಯ ಇತ್ಯಾದಿ. ಆದರೆ ಹೆಚ್ಚು ಸಿದ್ಧಿಗಳನ್ನು ಪಡೆಯುವುದರಿಂದ ನಮ್ಮ ಆಧ್ಯಾತ್ಮಿಕ ಬೆಳವಣಿಗೆ ವೃದ್ಧಿಯಾಗುತ್ತದೆಂದು ಹೇಳುವುದು ಕಷ್ಟ. ನನ್ನ ಪ್ರಾಮಾಣಿಕ ಅಭಿಪ್ರಾಯವೆಂದರೆ, ಅದು ಕಾಲ ವ್ಯರ್ಥ ಮಾಡಿದಂತೆ. ಆಧ್ಯಾತ್ಮಿಕ ಪ್ರಗತಿಯೆಂದರೇನು ಎಂದು ತಿಳಿಯಲು ನಾವು ಋಷಿಗಳನ್ನು, ಅಮರರವರಂಥ ಮಾಸ್ಟರ್‌ಗಳನ್ನು ಭೇಟಿಯಾಗಬೇಕು. ಈ ಪ್ರಪಂಚದಲ್ಲಿ, ಈ ಚುನಾವಣೆಗಳ ಮಧ್ಯೆ ನಮಗೆ ನಗಲು ಸಾಧ್ಯವಾದರೆ, ಎಲ್ಲರ ಜೀವನದಲ್ಲೂ ಸಹಜವಾಗಿಯೇ ಇರುವಂತಹ ನಂಬಿಕೆ ದ್ರೋಹಗಳು ಮತ್ತು ನೋವುಗಳ ನಡುವೆಯೂ ನಮ್ಮ ಮನಸ್ಸು ಕಹಿಯಾಗದಿದ್ದರೆ, ಆಗ ನಾವು ನಿಜವಾಗಿಯೂ ಆಧ್ಯಾತ್ಮಿಕ ವ್ಯಕ್ತಿಗಳೆಂದು ನಾನು ಹೇಳುತ್ತೇನೆ. "ಪ್ರೀತಿಯನ್ನು ಅಭಿವ್ಯಕ್ತಿಸಿ, ದೈವತ್ವವನ್ನು ಅಭಿವ್ಯಕ್ತಿಸಿ. ಜೊತೆಗೆ ವಿಸ್ತಾರಗೊಳ್ಳಲೇಬೇಕು" ಎಂದು ಯಾವಾಗಲೂ ಹೇಳುತ್ತಿರುತ್ತೇನೆ. ವಿಸ್ತರಣೆ ಎಲ್ಲಿರುತ್ತದೆಯೋ ಅಲ್ಲಿ ಘನತೆ ಗಾಂಭೀರ್ಯವಿರುತ್ತದೆ. ಅದನ್ನೇ ನಾನು ಆಧ್ಯಾತ್ಮಿಗಳಾಗಿರುವುದು ಎಂದು ಹೇಳುವುದು. ಅದನ್ನು ಪಡೆಯಲು ನೂರಾರು ಜನ್ಮಗಳನ್ನು ಕಳೆಯುವುದೂ ಯೋಗ್ಯವೇ. ಅದರ ಸ್ವಾರಸ್ಯಕರ ಭಾಗವೆಂದರೆ, ಅಂತಹ ನಿಜವಾದ ಆಧ್ಯಾತ್ಮಿಕ ವಿಷಯಗಳ ಹಿಂದೆ ಹೋದರೆ, ಕೆಲ ಸಮಯದ ನಂತರ ನಾವು ಎಲ್ಲಾ ಸಿದ್ಧಿಗಳನ್ನು ಪಡೆಯುತ್ತೇವೆ! ಆಗ ಅದನ್ನು ಬಳಸದಿರಬಹುದು; ಅದಕ್ಕೆ ಬೆಲೆಕೊಡದೆ ತಿರಸ್ಕರಿಸಲೂಬಹುದು. ಆದರೆ ನಾವು ಸಿದ್ಧಿಗಳ ಹಿಂದೆ ಮಾತ್ರವೇ ಹೋದರೆ, ಅಹಂ ವಿಸ್ತಾರಗೊಳ್ಳುತ್ತದೆಯೇ ಹೊರತು ಆಧ್ಯಾತ್ಮಿಕ ವಿಸ್ತರಣೆಯಾಗುವುದಿಲ್ಲ. ನಾವು ಮತ್ತೊಬ್ಬರ ಮನಸ್ಸನ್ನು ಓದುವುದು, ಭವಿಷ್ಯ ನುಡಿಯುವುದು ಮತ್ತು ಹೆಚ್ಚು ಹಣ ಮಾಡುವುದು ಇತ್ಯಾದಿಗಳನ್ನು ಮಾಡುತ್ತಾ ಹೋಗಬಹುದು. ನಾವು ಹಣವಂತರಾಗಬಹುದು ಆದರೆ ಆಧ್ಯಾತ್ಮಿಕರಾಗುವುದಿಲ್ಲ. ಇದನ್ನು ಅರ್ಥಮಾಡಿಕೊಳ್ಳುವುದು ನಿಮಗೆ ಸುಲಭ, ಏಕೆಂದರೆ ನೀವಿಲ್ಲಿದ್ದೀರಿ. ನೀವು ಸೋತ ವಿದ್ಯಾರ್ಥಿಗಳಲ್ಲ. ನೀವು ಅತ್ಯಂತ ಯಶಸ್ವಿಯಾದ ತಪೋನಗರದ ವಿದ್ಯಾರ್ಥಿಗಳು. ಬೇರೆಯವರಿಗೆ ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ■

## ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

22–06–2014

ಬೇರೊಂದು ನಗರದ ನಮ್ಮ ದೂರಕಲಿಕೆಯ ವಿದ್ಯಾರ್ಥಿಯೊಬ್ಬರು, ಹುಡುಗನೊಬ್ಬನ ಕೆಲವು ಅದ್ಭುತವಾದ ಅನುಭವಗಳನ್ನು ಬರೆದು ತಿಳಿಸಿದರು. ಅದು ತುಂಬ ಸ್ವಾರಸ್ಯಕರವಾಗಿದೆ. ಆ ಹುಡುಗನು 10ನೇ ತರಗತಿಯ ವಿದ್ಯಾರ್ಥಿಯಾಗಿದ್ದು ಖಾಸಗಿ ಶಿಕ್ಷಕರೊಬ್ಬರ ನೆರವು ಪಡೆಯುತ್ತಿದ್ದನು. ನವೆಂಬರ್ 2013ರಲ್ಲಿ ಆ ಶಿಕ್ಷಕರು, ಅವನನ್ನು ತರಬೇತುಗೊಳಿಸಲು ಸಾಧ್ಯವಿಲ್ಲವೆಂದು ಕೈಬಿಟ್ಟರು. ಆ ಸಮಯದಲ್ಲಿ ಅವನನ್ನು, ಲೈಟ್ ಚಾನಲಿಂಗ್ ಹೇಳಿಕೊಡುವ ನಮ್ಮ ಧ್ಯಾನಾಭ್ಯಾಸಿಯ ಬಳಿಗೆ ಕರೆತಂದರು. 9ನೇ ತರಗತಿಯಲ್ಲಿ ಆ ಹುಡುಗನು 48% ಅಂಕವನ್ನು ಗಳಿಸಿದ್ದನು. ಅವನು ತುಂಬ ಅಹಂಕಾರಿ ಮತ್ತು ಒರಟುತನದವನಾಗಿದ್ದನು. ಏಕೋ ಏನೋ, ಅವನು ಲೈಟ್ ಚಾನಲಿಂಗ್ ಅಭ್ಯಾಸವನ್ನು ಗಂಭೀರವಾಗಿ ಪರಿಗಣಿಸಿದನು. ಅತಿ ಶೀಘ್ರದಲ್ಲಿಯೇ ಅವನ ನಡವಳಿಕೆ ಬದಲಾಗಿ ಪ್ರಶಾಂತನಾದನು. ವಿದ್ಯಾಭ್ಯಾಸದಲ್ಲಿ ಅವನು ಸುಧಾರಿಸಿದನು. ಕೇವಲ ಕೆಲವೇ ತಿಂಗಳುಗಳಲ್ಲಿ ಅವನು 84% ಅಂಕ ಗಳಿಸಿದನು!! ಅವನಿಗೆ ಇನ್ನೂ ಅನೇಕ ಅನುಭವಗಳಾದವು.

ಈ ಹುಡುಗ ಗಣಿತದ ಪ್ರಶ್ನೆಪತ್ರಿಕೆಗೆ ಉತ್ತರಿಸುತ್ತಿದ್ದಾಗ ಒಂದು ಪ್ರಶ್ನೆಗೆ ಉತ್ತರ ಮರೆತು ಹೋಯಿತು. ಆಗ ಅವನು ಬೆಳಕನ್ನು ಪ್ರಾರ್ಥಿಸಿದ. ಉತ್ತರ ಬರೆಯುತ್ತಿದ್ದ ಹಾಳೆಯ ಮೇಲೆ, ನೆರಳಿನಂತೆ ಆ ಪ್ರಶ್ನೆಗೆ ಉತ್ತರವು ಕಾಣಿಸಿಕೊಂಡಿತು. ಅದೆಷ್ಟು ಸುಂದರ! ಅವರು ಮತ್ತೊಂದು ಅನುಭವವನ್ನು ಬರೆದಿದ್ದರು. ಒಂದು ದಿನ ಬಿರುಗಾಳಿ ಮತ್ತು ಧಾರಾಕಾರ ಮಳೆಯಿತ್ತು. ಅವರ ಮನೆಯ ಆವರಣದಲ್ಲಿ ಮಾವಿನಕಾಯಿಗಳಿಂದ ತುಂಬಿತುಳುಕುತಿದ್ದ ಮರವೊಂದಿತ್ತು. ಆ ಮರಕ್ಕೆ ಮತ್ತು ಅದರಲ್ಲಿನ ಪ್ರತಿಯೊಂದು ಕಾಯಿಗೂ ರಕ್ಷಣೆ ಸಿಗಬೇಕೆಂದು ಆ ಹುಡುಗ ಬಯಸಿ ಬೆಳಕಿಗೆ ಪ್ರಾರ್ಥಿಸಿದ. ಅದು ತುಂಬ ತೀವ್ರವಾದ ಬಿರುಗಾಳಿಯಾಗಿದ್ದುದರಿಂದ ಅನೇಕ ಮರಗಳು ಬೇರು ಸಹಿತ ಕೆಳಗೆ ಬಿದ್ದಿದ್ದವು, ಆದರೆ ಈ ಮರಕ್ಕೆ ಏನೂ ಆಗಲಿಲ್ಲ. ಒಂದೇ ಒಂದು ಮಾವಿನ ಕಾಯಿಯೂ ಮರದಿಂದ ಬೀಳಲಿಲ್ಲವೆಂದು ಹೇಳಿದರು. ಎಷ್ಟು ಆಶ್ಚರ್ಯಕರ! ಕೇವಲ ಕೆಲವೇ ತಿಂಗಳು ಲೈಟ್ ಚಾನಲಿಂಗ್ ಮಾಡಿದ ಈ ಬಾಲಕನಿಗೆ ಎಷ್ಟೊಂದು ಸುಂದರವಾದ ಅನುಭವಗಳಾಗಿವೆ. ಅವನ ಪ್ರಾಮಾಣಿಕ ಅಭ್ಯಾಸ ಮತ್ತು ಬೆಳಕಿನ ಮೇಲಿಟ್ಟಿರುವ ಪೂರ್ಣ ನಂಬಿಕೆ ಕೆಲಸ ಮಾಡಿದೆಯೆಂದು ನಾನು ಭಾವಿಸುತ್ತೇನೆ. ಅದೆಷ್ಟು ಸ್ಫೂರ್ತಿದಾಯಕ, ಎಷ್ಟೊಂದು ಸುಂದರ!

ಸೋಜಿಗವೆಂದರೆ, 'ನಾನು ಬೆಳೆಯುತ್ತಿಲ್ಲ. ವಾರ್ತಾಪತ್ರದಲ್ಲಿ ಬರುವ ಅನುಭವಗಳು ನನಗಾಗುತ್ತಿಲ್ಲ' ಎಂದು ಮತ್ತೊಬ್ಬ ದೂರಕಲಿಕೆಯ ವಿದ್ಯಾರ್ಥಿಯು ಬರೆದಿದ್ದಾರೆ. ಅನುಭಗಳು ಆಧ್ಯಾತ್ಮಿಕ ಪ್ರಗತಿಯನ್ನು ಸೂಚಿಸುವುದಿಲ್ಲವೆಂದು ನಮಗೆ ತಿಳಿದಿದೆ. ಆಧ್ಯಾತ್ಮಿಕ ಸತ್ಯಗಳನ್ನು ಇಷ್ಟೊಂದು ಸ್ಪಷ್ಟವಾಗಿ ತಿಳಿಸಿರುವುದಕ್ಕಾಗಿ ಅಮರಾಜಿ ಮತ್ತು ಗುರೂಜಿಯವರುಗಳಿಗೆ ನಾವು ವಂದಿಸಬೇಕು. ನಮ್ಮ ನಡವಳಿಕೆ ನಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ಸೂಚಿಸುತ್ತದೆ. ನಮ್ಮ ಒಟ್ಟಾರೆ ವ್ಯಕ್ತಿತ್ವ ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ಆ ಹುಡುಗನಿಗಾದಂತಹ ಅನುಭವಗಳಿಂದ ನಾವು ಸ್ಫೂರ್ತಿಗೊಳ್ಳೋಣ. ಆದರೆ ನಮಗೆ ಈ ಅನುಭವಗಳಾಗುತ್ತಿಲ್ಲದಿರುವುದಕ್ಕೆ ಬೇಸರಪಡುವುದು ಬೇಡ. ಎಲ್ಲರ ಅನುಭವವೂ ನಮ್ಮ ಅನುಭವವೇ ಎಂದು ನಮಗನ್ನಿಸುತ್ತದೆ. ಅದರಲ್ಲಿ ನಮಗೂ ಸಂದೇಶವಿರುತ್ತದೆ. ಈ ವ್ಯಕ್ತಿಗೆ ಬೆಳಕಿನೊಂದಿಗೆ ಇಷ್ಟೊಂದು ಸುಂದರವಾದ ಅನುಭವವಾಗಿದ್ದರೆ, ಅದರ ಅರ್ಥ ಬೆಳಕು ಇದೆ, ಬೆಳಕು ನಮ್ಮನ್ನು ಪ್ರೀತಿಸುತ್ತದೆ ಮತ್ತು ನಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ನಾವದನ್ನು ಕೇಳಬಹುದು ಎಂದು.

ಕೆಲವು ಜನರಿಗೆ ಕೆಲವು ರೀತಿಯ ಅನುಭವಗಳಾಗುತ್ತಿದ್ದರೆ ಇತರರಿಗೆ ಆಗುವುದಿಲ್ಲ. ಇದು ಹೀಗೇಕೆ ಎಂದು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ. ತುಂಬ ಸರಳವಾದ ಹಾಗೂ ಅತ್ಯುತ್ತಮವಾದ ಉದಾಹರಣೆಯೊಂದನ್ನು ಗುರೂಜಿಯವರು ಕೊಡುತ್ತಿದ್ದರು. ಇದನ್ನು ಅರ್ಥಮಾಡಿಕೊಳ್ಳಲು ಆ ಉದಾಹರಣೆ ಅತ್ಯುತ್ತಮವೆಂದು ನನಗೆ ಅನ್ನಿಸುತ್ತದೆ. ಹೊಸ ವಿದ್ಯಾರ್ಥಿಗಳಿಗೆ ಅದು ಸಹಾಯಕ. ನೀವೊಂದು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೀರೆಂದು ಊಹಿಸಿಕೊಳ್ಳಲು ಗುರೂಜಿಯವರು ಹೇಳುತ್ತಿದ್ದರು. ಕೆಲವರಿಗೆ ಕಿಟಕಿಯ ಬಳಿಯ ಆಸನ ಸಿಕ್ಕಿದರೆ ಮತ್ತೆ ಕೆಲವರಿಗೆ ಬೇರೆ ಆಸನಗಳು ಸಿಗುತ್ತವೆ; ಅವರು ಮಧ್ಯಭಾಗದಲ್ಲಿ ಕುಳಿತಿರಬಹುದು. ಕಿಟಕಿ ಬಳಿಯ ವ್ಯಕ್ತಿಗೆ ಏನು ಕಾಣಿಸುತ್ತದೆಯೋ ಅದು ಬೇರೆಯವರಿಗೆ ಕಾಣಿಸದಿರಬಹುದು. ಕೆಲವರು ನಿದ್ರಿಸುತ್ತಿರಬಹುದು. ಅವರಿಗೆ ಏನನ್ನೂ ನೋಡಲಾಗುವುದಿಲ್ಲ. ಆದರೆ ಅವರೆಲ್ಲರೂ ಮುಂದಕ್ಕೆ ಹೋಗುತ್ತಿರುತ್ತಾರೆ. ಆದ್ದರಿಂದ ಅನುಭವಗಳೆಂದರೆ ಹಾಗಿರುತ್ತವೆ. ಕೆಲವರಿಗೆ ಅನುಭವಗಳಾಗುತ್ತವೆ, ಕೆಲವರಿಗೆ ಆಗುವುದಿಲ್ಲ ಆದರೆ ನಾವೆಲ್ಲರೂ ಮುಂದೆ ಹೋಗುತ್ತಿರುತ್ತೇವೆ. ಆದ್ದರಿಂದ, ನಾವು ಅದರಿಂದ ಸ್ಫೂರ್ತಿ ಪಡೆಯೋಣ. ಆದರೆ ಎಂದೆಂದಿಗೂ ಎದೆಗುಂದದಿರೋಣ.

10–8–2014

"ನನ್ನ ಸೋಲುಗಳಿಗಾಗಿ ಜನರು ದೂಷಿಸಿದಾಗ, ಕೆಲವು ಸಮಯದವರೆಗೆ ನಾನು ಖಿನ್ನತೆಗೊಳಗಾಗುತ್ತೇನೆ. ಆ ಖಿನ್ನತೆಯಿಂದ ನಾನು ಹೇಗೆ ಹೊರಬರಲಿ?" ಎಂದು ಒಬ್ಬರು ಕೇಳಿದರು. ನಾವೆಲ್ಲರೂ ನಮ್ಮ ಜೀವನದಲ್ಲಿ ಈ ರೀತಿಯ ಖಿನ್ನತೆಯ ಕ್ಷಣಗಳನ್ನು ಹಾದುಹೋಗುತ್ತೇವೆ. ಅದಕ್ಕೆ ಬೇರೆಬೇರೆ ಕಾರಣಗಳಿರಬಹುದು. ನಾವು ಆಧ್ಯಾತ್ಮಿಕವಾಗಿ ಬಲಗೊಳ್ಳಬೇಕು. ನಮ್ಮ ಮೇಲೆ ನಂಬಿಕೆ ಹೆಚ್ಚಿಸಿಕೊಳ್ಳಬೇಕು. ಬೇರೆಯವರು ನಾವು ತುಂಬ ದುರ್ಬಲರು ಎನಿಸುವಂತೆ ಮಾಡಬಹುದು, ಆದರೆ ನಾವು ದುರ್ಬಲರಲ್ಲ. ನಾವು ದೇವರ ಒಂದು ಭಾಗ. ನಾವು ಅಂತರ್ಮುಖಿಗಳಾಗಿ, ಸೋಲೇ ಕೊನೆಯಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಅರಿತುಕೊಳ್ಳಬೇಕು. ನಾವು ಪ್ರಮಾಣಗಳನ್ನು ಬಳಸಿಕೊಳ್ಳಬೇಕು. ಧ್ಯಾನ ಬಹುಮುಖ್ಯ. ಸೋಲನ್ನೇ ನಾವು ಮೊದಲ ಮೆಟ್ಟಿಲನ್ನಾಗಿಸಿಕೊಳ್ಳಬಹುದು, ನಮ್ಮೆಲ್ಲ ಶಕ್ತಿಗಳನ್ನು ಒಗ್ಗೂಡಿಸಿಕೊಂಡು ಹೊಸ ಉತ್ಸಾಹದೊಂದಿಗೆ ಈ ಸೋಲನ್ನು ಮೀರುವ ಪ್ರಯತ್ನ ಮಾಡಬಹುದು.

ನಮ್ಮ ಸೋಲುಗಳಲ್ಲಿ ನಮಗೆ ಪಾಠಗಳಿರುತ್ತವೆನ್ನುವುದನ್ನು ಅರಿತುಕೊಳ್ಳುವುದಕ್ಕೂ ನಾವು ಪ್ರಯತ್ನಿಸಬೇಕು. ಜೀವನದ ಎಲ್ಲಾ ಅನುಭವಗಳಿಂದಲೂ ನಾವು ಕಲಿಯುವುದಿರುತ್ತವೆ. ನಿಜವೆಂದರೆ, ಸೋಲು ಅಥವಾ ಗೆಲುವು ನಮ್ಮ ಹಿಡಿತದಲ್ಲಿರುವುದಿಲ್ಲ. ಪ್ರಯತ್ನ ಮಾಡುವುದಷ್ಟೇ ನಮ್ಮ ಹಿಡಿತದಲ್ಲಿರುವುದು. ನಮ್ಮ ಪ್ರಯತ್ನಗಳಲ್ಲಿ ನಾವು ಹಿಂದೆ ಬೀಳದಿರುವವರೆಗೂ ನಿರುತ್ಸಾಹಗೊಳ್ಳಬೇಕಾಗಿಲ್ಲ. ದೇವರ ಮೇಲೆ ಅಪಾರವಾದ ನಂಬಿಕೆಯನ್ನೂ ನಾವು ಬೆಳೆಸಿಕೊಳ್ಳಬೇಕು. ಸೋಲುಗಳು ಮತ್ತು ಜೀವನದ ನೋವಿನ ಅನುಭವಗಳನ್ನು ನಾವು ಅನುಭವಿಸಬೇಕೆಂದು ಅವನು ಬಯಸಿದ್ದರೆ, ಅದೇ ನಮಗೆ ಸರಿಯಾದುದಾಗಿರುತ್ತದೆ. ಯಾವುದೇ ಸಮಸ್ಯೆ ಅಥವಾ ವೈಫಲ್ಯವನ್ನು ವಾಸ್ತವವೆಂದು ನಾವು ಒಪ್ಪಿಕೊಳ್ಳಬೇಕು ಮತ್ತು ಆ ಸನ್ನಿವೇಶಗಳಿಂದ ಹೊರಬರುವ ಪ್ರಯತ್ನ ಮಾಡಬೇಕು. ಆದ್ದರಿಂದ ಅನುಭವಿಸುತ್ತಿರುವುದೆಲ್ಲವನ್ನೂ ನಾವು ಸಂಪೂರ್ಣವಾಗಿ ಒಪ್ಪಿಕೊಂಡರೆ ಖಿನ್ನತೆಯಿಂದ ಹೊರಬರಲು ಸಹಾಯವಾಗುತ್ತದೆ.

ಒಂದು ದ್ವಾರ ಮುಚ್ಚಿದರೆ ಇನ್ನೂ ಅನೇಕ ದ್ವಾರಗಳು ತೆರೆಯುತ್ತವೆಂದು ಗುರೂಜಿಯವರು ಹೇಳುತ್ತಿದ್ದರು. ಈ ಜೀವನವು ಅವಕಾಶಗಳಿಂದ ತುಂಬಿದೆ. ನಾವು ಬೆಳಕಿನ ಸಹಾಯವನ್ನೂ ಪಡೆಯಬೇಕು. ಬೆಳಕಿನ ಬಗ್ಗೆ ನಾವು ಯೋಚಿಸಬಹುದು. ನಮ್ಮ ಶಾರೀರಿಕ ವ್ಯವಸ್ಥೆಯನ್ನು ಬೆಳಕಿನಿಂದ ತುಂಬಬಹುದು. ಅದು ತುಂಬ ಸಹಾಯಮಾಡುತ್ತದೆ. ತೆಗಳಿಕೆಗಳನ್ನು ಸ್ವೀಕರಿಸಲು ನಾವು ಶಕ್ತಿಯನ್ನು ಒಗ್ಗೂಡಿಸಬೇಕು. ನಮ್ಮ ಆಯ್ಕೆಗಳು ಆಧ್ಯಾತ್ಮಿಕ ನಿಯಮಗಳ ಮೇಲೆ ಆಧಾರಿತವಾಗಿದ್ದರೆ, ಆಗ ನಮ್ಮ ನಂಬಿಕೆಗಳು ಬಲಯುತವಾಗಿರುತ್ತವೆ. ಯಾವ ತೆಗಳಿಕೆಯೂ ನಮ್ಮನ್ನು ಸುಲಭವಾಗಿ ಅಡ್ಡಿಪಡಿಸಲಾರದು; 'ಆಂತರಿಕ ಆಕಾಶ' (inner sky)ವನ್ನು ಅನುಭವಿಸುವ ಪ್ರಯತ್ನವನ್ನೂ ಮಾಡಬಹುದೆಂದು ಗುರೂಜಿಯವರ ಸಲಹೆ ನೀಡಿದ್ದರು. ಇದೊಂದು ತುಂಬ ಸರಳವಾದ ತಂತ್ರ. ಮುಷ್ಟಿ ಗಾತ್ರದ ಆಕಾಶವೊಂದು ಎದೆಯ ಮಧ್ಯಭಾಗದಲ್ಲಿದೆಯೆಂದು ನಾವು ಊಹಿಸಿಕೊಳ್ಳಬೇಕು. ಅದು ಚಿದಾಕಾಶ ಅಥವ ದೇವರ ಅಭಿವ್ಯಕ್ತಗೊಳ್ಳದ ಭಾಗ ಎಂದು ಗುರೂಜಿಯವರು ಹೇಳುತ್ತಿದ್ದರು. ಈ ಆಕಾಶವನ್ನು ಮೂರು ನಿಮಿಷಗಳಿಗೆ ಮೀರದಂತೆ ಅನುಭವಿಸಿ. ಇದು ನಮ್ಮ ಖಿನ್ನತೆಯನ್ನು ಎದುರಿಸಲು ಸಹಾಯಮಾಡುತ್ತದೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫ್ಲೀಯು ರೂ. 4500. ಈ ಫ್ಲೀನಲ್ಲಿ 14% ಸೇವಾ ತೆರಿಗೆ, ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫ್ಲೀಯು ರೂ. 3500. ಈ ಫ್ಲೀನಲ್ಲಿ 14% ಸೇವಾ ತೆರಿಗೆ ಮತ್ತು ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಗುರೂಜಿ ನಮ್ಮ ಮಾಸ್ಟರ್

**ಶೋಭ ಕೆ. ರಾವ್; ಅನು: ಪಾಂಡುರಂಗ**

ಗುರೂಜಿಯವರಂತಹ ಮಾಸ್ಟರ್‌ಗಳು ಜನ್ಮ ತಳೆದ ಉದ್ದೇಶವೇ ಈ ಜಗತ್ತನ್ನು ಆಧ್ಯಾತ್ಮಿಕವಾಗಿ ಪ್ರವರ್ಧನಮಾನ ಸ್ಥಿತಿಗೆ ತರಲೆಂದು ಮತ್ತು ಇಡೀ ಮನುಕುಲವು ಉನ್ನತ ಮಟ್ಟದ ಪ್ರಜ್ಞೆಯೆಡೆಗೆ, ಪರಿಪೂರ್ಣತೆಯೆಡೆಗೆ ಮತ್ತು ಹೊಸ ಯುಗದ ಕಡೆಗೆ ಮುನ್ನಡೆಯಲು ಸಹಾಯ ಮಾಡಲೆಂದು.

ಪ್ರತಿಯೊಂದು ಆಲೋಚನೆಯ ಹಿಂದಿನ, ಭಾವನೆಯ ಹಿಂದಿನ, ಮತ್ತು ಕಾರ್ಯದ ಹಿಂದಿನ ಉದ್ದೇಶ ಮುಖ್ಯವೆಂದು ಗುರೂಜಿಯವರು ಹೇಳಿದ್ದರು. ಗುರೂಜಿಯವರು ಪರಿಶುದ್ಧವಾದ ಮತ್ತು ನಿಸ್ವಾರ್ಥ ಉದ್ದೇಶ ಹೊಂದಿದ್ದರಿಂದ, ಅವರು ಮನುಕುಲದ ಒಳಿತಿಗಾಗಿ ಕಂಡಿದ್ದ ಕನಸುಗಳೆಲ್ಲವೂ ಈಡೇರಿದವು. ಅವರು ಅತ್ಯುತ್ಕೃಷ್ಟ ವಿಶ್ವ ಮಾನವರಾಗಿದ್ದರು. ಗುರೂಜಿಯವರು ಒಂದು ಚಿಕ್ಕ ಗುಡಿಸಿಲಿನಲ್ಲಿ ವಾಸಿಸುತ್ತ, ಸಣ್ಣ ಪ್ರಮಾಣದಲ್ಲಿ ಕೆಲಸ ಪ್ರಾರಂಭಿಸಿದರು. ಗುರೂಜಿಯವರು ಅನೇಕ ವರ್ಷಗಳವರೆಗೆ ತಮ್ಮ ಅಗಾಧವಾದ ಸಹನೆ ಮತ್ತು ಸಹಿಷ್ಣುತೆಯಿಂದ ಕೆಲಸ ಮಾಡಿದ್ದರ ಫಲದಿಂದ, ಇವತ್ತು 'ಮಾನಸ' ಒಂದು ಸುಂದರವಾದ ಸ್ಥಳವಾಗಿ ಕಂಗೊಳಿಸುತ್ತಿದೆ. 'ಮಾನಸ' ದೈವೀ ಚೈತನ್ಯಗಳ ಭಂಡಾರವಾಗಿದೆ, ಮತ್ತು ಸುವ್ಯವಸ್ಥೆಯ ನೆಲೆಯಾಗಿದೆ. ಇಡೀ ಜಗತ್ತಿನ ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಮಾನಸ ತನ್ನ ಬಾಗಿಲುಗಳನ್ನು ತೆರೆದುಕೊಂಡಿದೆ.

ನಮಗೆಲ್ಲರಿಗೂ ಗುರೂಜಿ ಒಬ್ಬ ಅಧ್ಯಾತ್ಮಿಕ ತಾಯಿಯಾಗಿದ್ದರು. ಸೌಮ್ಯ, ಮೃದು ಭಾಷಿ, ಸಹನ ಶೀಲರಾದ ಅವರಲ್ಲಿ ಪ್ರೀತಿ ಮತ್ತು ಕ್ಷಮಾಗುಣ ಮನೆಮಾಡಿತ್ತು. ಗುರೂಜಿ ಒಬ್ಬ ತಾಯಿಯಂತೆ ಪ್ರತಿಯೊಬ್ಬರನ್ನು ಎಲ್ಲ ಸಮಯದಲ್ಲೂ ಕಾಳಜಿಯಿಂದ ಮಾರ್ಗದರ್ಶಿಸುತ್ತಿದ್ದರು. ಆಗ ಆತ್ಮೀಯರಾಗಿದ್ದವರೆಲ್ಲರೂ ಈಗಲೂ ಗುರೂಜಿಯವರಿಗೆ ಅಷ್ಟೆ ಆತ್ಮೀಯರಾಗಿದ್ದಾರೆ.

ಗುರೂಜಿಯವರು ನಮಗೆ ಧ್ಯಾನ ಕಲಿಸಿದ್ದಾರೆ. ಹಾಗೇ ನಮಗೆ ನಾವೇ ಹೇಗೆ ಎಲ್ಲ ಮಟ್ಟಗಳಲ್ಲೂ ಸುಧಾರಿಸಿಕೊಳ್ಳಬೇಕೆಂದು ತಿಳಿಸಿಕೊಟ್ಟಿದ್ದಾರೆ. ಅನುಭವಿಸುವ ಉದ್ದೇಶದಿಂದಲೇ ನಾವು ಈ ಭೂಮಿಗೆ ಬಂದಿದ್ದೇವೆ ಎಂಬುದರ ಅರಿವು ಮೂಡಿಸಿದ್ದಾರೆ. 'ಅನುಭವಿಸುವುದು' ಎಂಬ ಪದದ ನಿಜವಾದ ಅರ್ಥವನ್ನು ಮತ್ತು ಸಾಧನೆಯೆಂದರೆ ಒಬ್ಬ ವ್ಯಕ್ತಿ ತನ್ನ ಪ್ರಜ್ಞೆಯನ್ನು ಸ್ಥೂಲ ಮಟ್ಟದಿಂದ ಅತ್ಯಂತ ಸೂಕ್ಷ್ಮ ಮಟ್ಟದವರೆಗೆ ಅಂದರೆ ದೇವರವರೆಗೆ ಸ್ಥಿತ್ಯಂತರಗೊಳಿಸಿಕೊಳ್ಳುವುದು, ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಾಯ ಮಾಡಿದ್ದಾರೆ.

ವಿಶ್ವದಲ್ಲಿ ಋಷಿಗಳ ಕೆಲಸ ಮತ್ತು ಗುರುವಿನ ಕೆಲಸ ಅತ್ಯಂತ ಉದಾತ್ತವಾದುದು ಮತ್ತು ಅಷ್ಟೇ ಕಠಿಣವಾದುದು, ಏಕೆಂದರೆ ಅವರು ಎಲ್ಲ ರೀತಿಯ ಜನರನ್ನು ಅತ್ಯಂತ ಪ್ರೀತಿ ಮತ್ತು ಸಹನೆಯಿಂದ ನಿಭಾಯಿಸಬೇಕಾಗುತ್ತದೆ, ಎನ್ನುವುದು ನಮಗೀಗ ತಿಳಿದಿದೆ. ಅವರು ಲಕ್ಷಾಂತರ ಜನ್ಮಾವಧಿಗಳಿಂದ ಜನರನ್ನು ಸಹನೆಯಿಂದ ಮಾರ್ಗದರ್ಶಿಸುತ್ತ, ಮೇಲ್ವಿಚಾರಣೆ ಮಾಡುತ್ತ ಅಧ್ಯಾತ್ಮಿಕವಾಗಿ ಉನ್ನತ ಮಟ್ಟಕ್ಕೆ ಏರಲು ಸಹಾಯ ಮಾಡುತ್ತಿದ್ದಾರೆ. ಇದರಿಂದ ಜನರು ಅಂತಿಮವಾಗಿ ತಮ್ಮ ನಿಜವಾದ ಮನೆಯನ್ನು ಸೇರಿ ಅಂದರೆ ದೇವರನ್ನು ಸೇರಿ, ತಮ್ಮ ಜೀವಿತೋದ್ದೇಶವನ್ನು ಈಡೇರಿಸಿಕೊಳ್ಳುತ್ತಾರೆ. ■

## ಗುರೂಜಿ

**ವೈಶಾಲಿ ಜೋಶಿ; ಅನು: ವರ್ಷಾ ದೀಪಕ್**

ಋಷಿಗಳ ಜಟಿಲವಾದ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಗುರೂಜಿಯವರು ಹುಟ್ಟಿಬಂದರು. ಚೈತನ್ಯಗಳ ಸ್ಥಾಪನೆ, ಕಟ್ಟಡಗಳ ಹಾಗೂ ಸೂಕ್ಷ್ಮಮಟ್ಟದ ಕೊಠಡಿಗಳ ನಿರ್ಮಾಣ ಕಾರ್ಯ ಮತ್ತು ಮಾನಸಿ ಆಧ್ಯಾತ್ಮಿಕ ವಲಯದ ರಚನೆಗಳ ಮೂಲಕ ಸಪ್ತಋಷಿಗಳ ಕೇಂದ್ರವಾದ ತಪೋನಗರವನ್ನು ಅಭಿವೃದ್ಧಿಗೊಳಿಸುವುದು ಅವರು ಕೈಗೊಂಡ ಅನೇಕ ಕೆಲಸಗಳಲ್ಲಿ ಒಂದು. ತಪೋನಗರವು ಋಷಿಗಳ ಮತ್ತು ಬೇರೆ ಅನೇಕ ಸೂಕ್ಷ್ಮ ವ್ಯಕ್ತಿಗಳ ತಾಣವಾಗಿ ಬೆಳೆದಿರುವುದರಿಂದ, ಸೂಕ್ಷ್ಮಮಟ್ಟದ ಸಂದರ್ಶಕರು ಈ ಭೂಮಿಗೆ ಬಂದಾಗ ಅವರನ್ನು ಮೊಟ್ಟಮೊದಲಿಗೆ ಇದು ತನ್ನತ್ತ ಸೆಳೆಯುತ್ತದೆ.

ಅವರು ನಮಗೆ ಬೆಳಕನ್ನು ಪರಿಚಯಿಸಿದರು. ಅವರು ಧ್ಯಾನದ ಜೊತೆಗೆ ಈ ಜೀವನವನ್ನು ಸಂಪೂರ್ಣವಾಗಿ ಜೀವಿಸುವುದನ್ನೂ ಕಲಿಸಿದರು. ಅವರು ತಮ್ಮ ಬಳಿ ಮಾರ್ಗದರ್ಶನ ಬಯಸಿ ಬಂದ ಪ್ರತಿಯೊಬ್ಬರಿಗೂ, ಅದು ಆಧ್ಯಾತ್ಮಿಕವಾಗಿರಲಿ ಅಥವಾ ಲೌಕಿಕವಾಗಿರಲಿ, ತುಂಬು ಹೃದಯದಿಂದ, ಪ್ರತಿಯೊಂದು ವಿವರದಲ್ಲೂ ಕೂಡಾ ಮಾರ್ಗದರ್ಶನ ಮಾಡುತ್ತಿದ್ದರು. ನಾವು ಮಾನವ ಮಟ್ಟದಿಂದ ಮೇಲೆ ಹೋಗಿ ಜೀವನವನ್ನು ಉನ್ನತ ದೃಷ್ಟಿಕೋನದಿಂದ ನೋಡುವ ಪ್ರಯತ್ನ ಮಾಡಬೇಕೆಂದು ಹೇಳಿದರು. ಅದು ನಮ್ಮ ಆದ್ಯತೆಗಳ ಬಗ್ಗೆ ಸ್ಪಷ್ಟತೆಯನ್ನು ತರುತ್ತದೆ. ನಾವು ಸದಾ ಮೌಲ್ಯಾಧಾರಿತ ವಿಷಯಗಳನ್ನು ಬೆಂಬತ್ತಬೇಕು. ಹಾಗೂ ನಮಗೇ ಮನದಟ್ಟಾದ ನಮ್ಮ ಸ್ವಂತ ನಂಬಿಕೆಗಳನ್ನು ಬೆಂಬತ್ತಲು ನಾವು ಸಾಕಷ್ಟು ಶಕ್ತಿಯನ್ನು ಹೊಂದಿರಬೇಕು.

ಸಮತೋಲನದ ಜೀವನವನ್ನು ಬಾಳುವ ರೀತಿಯಲ್ಲಿಯೇ, ಸಂಬಂಧಗಳಲ್ಲಿ ಸಂತುಲನೆಯನ್ನು ಹೊಂದಿರುವುದು ಕೂಡಾ ಆಧ್ಯಾತ್ಮಿಕತೆ ಎಂದು ಅವರು ನಮಗೆ ಕಲಿಸಿದರು. ಅಂತಹ ಸಂಬಂಧಗಳಲ್ಲಿ ಪರಸ್ಪರ ಗೌರವ ಮತ್ತು ಸ್ವಾತಂತ್ರ್ಯವಿರುತ್ತದೆ. ಗೌರವಯುತ ಅಂತರ ಪ್ರಜ್ಞಾಪೂರ್ವಕವಾಗಿ ಬೆಳೆದುಕೊಳ್ಳುತ್ತದೆ ಮತ್ತು ಅಭಿಪ್ರಾಯಗಳನ್ನು ಇತರರ ಮೇಲೆ ಹೇರುವುದು ಅಥವಾ ಹಸ್ತಕ್ಷೇಪ ಮಾಡುವುದು ಇರುವುದಿಲ್ಲ. ಅವು ಅತ್ಯಂತ ನಿಕಟ ಸಂಬಂಧಗಳಾಗಿದ್ದರೂ ಕೋರಿಕೆ ರಹಿತವಾಗಿದ್ದು ನಿಸ್ವಾರ್ಥತೆ ಹಾಗೂ ದೈವೀ ಪ್ರೀತಿಯ ಮೇಲೆ ನಿಂತಿರುತ್ತವೆ.

ಗುರೂಜಿಯವರು ತಮ್ಮ ಬೋಧನೆಯನ್ನು ಬದುಕಿ ತೋರಿಸಿದರು. ಅವರು ನಮ್ಮೊಂದಿಗೆ ಯಾವಾಗಲೂ ಆತ್ಮದ ಮಟ್ಟದಲ್ಲಿ ಸಂಬಂಧ ಕಲ್ಪಿಸುತ್ತಿದ್ದರು. ಅದು ಎಲ್ಲರೊಂದಿಗೂ ಸಮಾನವಾಗಿತ್ತು. ಭೌತಿಕ ಅಂತರ ಏನೇ ಇದ್ದರೂ, ಪ್ರತಿಯೊಬ್ಬ ವಿದ್ಯಾರ್ಥಿಯೂ ಅವರಿಗೆ ವಿಶೇಷ ಮತ್ತು ಅತ್ಯಂತ ನಿಕಟವಾಗಿದ್ದರು. ಪ್ರತಿ ವಿದ್ಯಾರ್ಥಿಗಿದ್ದ ಕಾಳಜಿಯು ಅವರ ಕಾಳಜಿಯೂ ಆಗಿರುತ್ತಿತ್ತು. ಗುರೂಜಿಯವರು ವಿದ್ಯಾರ್ಥಿಗಳ ವಿವಿಧ ಅಗತ್ಯತೆಗಳನ್ನು ಅರ್ಥಮಾಡಿಕೊಂಡಿದ್ದರು ಮತ್ತು ಆತನಿಗೆ/ಆಕೆಗೆ ಅತ್ಯಂತ ಸೂಕ್ತವಾಗುವ ರೀತಿಯಲ್ಲಿ ಮಾರ್ಗದರ್ಶಿಸುತ್ತಿದ್ದರು.

ಅವರು ನಮ್ಮೊಂದಿಗೆ ಭೌತಿಕವಾಗಿಲ್ಲದ ಈ ಸಮಯದಲ್ಲೂ ಕೂಡಾ, ಅವರೊಂದಿಗಿನ ನಮ್ಮ ಸಂಬಂಧವು ಅತ್ಯಂತ ನಿಕಟವಾಗಿ ಮುಂದುವರೆಯುತ್ತಿದೆ. ಇದು ಎಲ್ಲವನ್ನೂ ಮೀರಿದ ಅತೀ ಸುಂದರವಾದ ಮತ್ತು ಬಹಳ ಪವಿತ್ರವಾದ ಸಂಬಂಧವಾಗಿದೆ. ■

# ಪ್ರಶ್ನೆಗಳು ಮತ್ತು ಉತ್ತರಗಳು

ಸಂ: ಶೋಭಾ ಕೆ.ರಾವ್; ಅನು: ಪಾಂಡುರಂಗ

**ಪ್ರ: ಎಲ್ಲಾ ವ್ಯವಸ್ಥೆಗಳಲ್ಲೂ ಭ್ರಷ್ಟಚಾರ ತುಂಬಿರುವಾಗ, ಮುಂದೆ ಉತ್ತಮ ಜೀವನದ ಭರವಸೆ ಇದೆಯೇ?**

ಉ: ಇದೆ, ಏಕೆಂದರೆ ಈ ಭೂಮಿಯ ಮೇಲೆ ಉತ್ತಮ ಜನರೂ ಇದ್ದಾರೆ. ಯಾವಾಗ ದುಷ್ಟ ಚೈತನ್ಯಗಳನ್ನು ಹಿಂದೆ ತಳ್ಳುತ್ತೇವೆಯೋ, ಆಗ ಈ ವ್ಯವಸ್ಥೆಗಳು ಕುಸಿಯುವುದನ್ನು ಕಾಣಬಹುದು ಮತ್ತು ಅಧಿಕಾರದಲ್ಲಿರುವ ಜನರು ಅಸ್ತಿತ್ವ ಇಲ್ಲದವರಾಗುತ್ತಾರೆ; ಆಗ ಒಳ್ಳೆಯ ಜನರು ಪ್ರಕಾಶಿಸುವುದನ್ನು ಕಾಣಬಹುದು. ಈ ಭೂಮಿ ಮೇಲೆ ಅತ್ಯುತ್ತಮ ಜೀವನದ ಭರವಸೆಯಿದೆ, ಕಾರಣ ನಮ್ಮಲ್ಲಿ ಹೊಸ ಚೈತನ್ಯಗಳಿರುವುದು ನಮ್ಮ ಅರಿವಿಗೆ ಬಂದಿದೆ. ನಮ್ಮಲ್ಲಿ 'ರಾ' ಚೈತನ್ಯಗಳು ಮತ್ತು ಫೋಟಾನ್ ಬೆಲ್ಟ್ ಚೈತನ್ಯಗಳಿವೆ ಹಾಗೂ ನಾವು ಸೌರವ್ಯೂಹದ ಮಧ್ಯದಿಂದ ಚೈತನ್ಯಗಳನ್ನು ಪಡೆದುಕೊಳ್ಳುವವರಿದ್ದೇವೆ. ಜೊತೆಗೆ ದ್ವಿತೀಯ ಸೂರ್ಯನಿಂದ ಸಹ ಚೈತನ್ಯಗಳನ್ನು ನಾವು ಪಡೆಯುವವರಿದ್ದೇವೆ.

**ಪ್ರ: ವ್ಯವಸ್ಥೆಗಳು ಕುಸಿದ ನಂತರ, ನಾವು ಹೇಗೆ ಜೀವಿಸುವುದು?**

ಉ: ಹೊಸ ವ್ಯವಸ್ಥೆಗಳು ಜಾರಿಗೆ ಬರುತ್ತವೆ. ಆ ಹೊಸ ವ್ಯವಸ್ಥೆಗಳಿಗಾಗಿ ನಾವು ಕಾಯೋಣ. ಈ ಹೊಸ ವ್ಯವಸ್ಥೆಗಳು ನಮ್ಮನ್ನು ಯಾವಾಗಲೂ ರಕ್ಷಿಸುತ್ತವೆ. ಅದಕ್ಕೂ ಮೊದಲು, ಆಧ್ಯಾತ್ಮಿಕರಾಗುವುದಕ್ಕೆ, ಒಳ್ಳೆಯವರಾಗುವುದಕ್ಕೆ ಹಾಗೂ ಅ-ಪ್ರೀತಿಯನ್ನು ತ್ಯಜಿಸುವುದಕ್ಕೆ ನಾವು ಸಿದ್ಧರಾಗೋಣ.

**ಪ್ರ: ನಾವು ನಿಮ್ಮೊಂದಿಗೆ ಮಾನಸಿಕವಾಗಿ ಮಾತನಾಡಿದಾಗ, ಅದು ನಿಮಗೆ ನೆನಪಿರುತ್ತದೆಯೇ?**

ಉ: ಆಳದ ಮಟ್ಟದಲ್ಲಿ ನನಗದರ ಪೂರ್ಣ ಅರಿವಿರುತ್ತದೆ. ಕೆಲವೊಮ್ಮೆ ಅದು ತುಂಬ ಮುಖ್ಯವಾಗಿದ್ದರೆ, ಅದನ್ನು ತಿಳಿಯಲು, ನಾನು ಆಳಕ್ಕಿಳಿದು ಪ್ರಯತ್ನಿಸಬೇಕಾಗುತ್ತದೆ. ಇನ್ನು ಕೆಲವು ವೇಳೆ ನಿಮ್ಮ ಸಂದೇಶಗಳಲ್ಲಿ ಒಂದು ರೀತಿಯ ತೀವ್ರತೆ ಇದ್ದರೆ, ಈ ಮಟ್ಟದಲ್ಲಿಯೂ ನನಗದರ ಅರಿವಾಗುತ್ತದೆ.

**ಪ್ರ: ಯಾವಾಗಲೂ ನಾವು ನಿಮಗೆ ಪ್ರಶ್ನೆಗಳನ್ನು ಕೇಳುತ್ತೇವೆ. ಆದರೆ ನೀವು ನಮಗೆ ಪ್ರಶ್ನೆಗಳನ್ನು ಕೇಳುವುದಿಲ್ಲ, ಏಕೆ?**

ಉ: ನನಗೂ ಪ್ರಶ್ನೆಗಳನ್ನು ಕೇಳಬೇಕೆನಿಸುತ್ತದೆ. ಆದರೆ ನಾನು ಪ್ರಶ್ನೆ ಕೇಳಿದರೆ, ನಿಮಗೆ ಉತ್ತರಿಸುವುದು ಕಷ್ಟವಾಗಬಹುದು. ನಾನು ಪ್ರಶ್ನೆಗಳನ್ನು ಕೇಳುವುದಿಲ್ಲ, ಕಾರಣ ನನಗೆ ಉತ್ತರಗಳು ಗೊತ್ತಿರುತ್ತವೆ.

**ಪ್ರ: ಒಂದು ವೇಳೆ ನಾನು ಜಗತ್ತಿನ ಒಳಿತಿಗಾಗಿ 'ಉರುಳು ಸೇವೆ' ಮಾಡಿದರೆ, ಒಳ್ಳೆಯದಾಗುವುದೆ?**

ಉ: 'ಉರುಳು ಸೇವೆ' ಎಂದರೆ, ಜನರು ಮನಸ್ಸಿನಲ್ಲಿ ಒಂದು ಹರಕೆ ಕಟ್ಟಿಕೊಂಡು, ದೇವಸ್ಥಾನದ ಸುತ್ತ ಅನೇಕ ಸಲ ಉರುಳಿಕೊಂಡು ಸುತ್ತುತ್ತಾರೆ. ಅದು ನಿಮಗೇ ಸಹಾಯ ಮಾಡುವುದಿಲ್ಲ. ಜಗತ್ತಿಗೆ ಯಾವ ರೀತಿಯ ಸಹಾಯ ಮಾಡಬಲ್ಲದು? ನೀವು ನಿಜವಾಗಿಯೂ ಜಗತ್ತಿಗೆ ಸಹಾಯ ಮಾಡಬೇಕೆಂದುಕೊಂಡರೆ, ನೀವೇ ಪರಿವರ್ತನೆಗೊಳ್ಳಿ. ಪ್ರೀತಿಯನ್ನು ಹರಡಿ. ಬೆಳಕನ್ನು ಚಾನಲ್ ಮಾಡಿ.

**ಪ್ರ: 'ಹರಕೆ' ಯಾವ ರೀತಿ ಕೆಲಸ ಮಾಡುತ್ತದೆ?**

ಉ: ಇದರ ಅರ್ಥ, ದೇವರಿಗೆ ಮುಡಿಪು ಸಲ್ಲಿಸುವುದಾಗಿ ಪ್ರಮಾಣ ಮಾಡುವುದು. ನಾವು ಎರಡು ರೀತಿಯ ದೇವತೆಗಳನ್ನು ಪೂಜಿಸುತ್ತೇವೆ – ದೈವೀ ಲೋಕದಿಂದ ಬಂದಂಥ ದೇವರುಗಳು ಮತ್ತು ಕೆಳಗಿನ ಲೋಕಗಳಿಂದ ಬಂದಂಥ ದೇವರುಗಳು. ಗ್ರಾಮ ದೇವತೆಯೆಂದರೆ ಒಂದು ಸಣ್ಣ ಹಳ್ಳಿಯ ಯೋಗಕ್ಷೇಮ ನೋಡಿಕೊಳ್ಳುವ ದೇವರು. ಕೆಲವೊಮ್ಮೆ ಈ ಗ್ರಾಮ ದೇವತೆಗಳು ಬೇರೆ ಲೋಕಗಳಿಂದ ಬಂದವರಾಗಿದ್ದು, ಪ್ರಾಣಿಬಲಿಯನ್ನು ಇಷ್ಟ ಪಡುತ್ತಾರೆ. ನೀವು ಇಂತಹ ದೇವರುಗಳಿಗೆ ಹರಕೆ ಕಟ್ಟಿಕೊಂಡು, ಏನಾದರೂ ಮಾಡುತ್ತೇನೆಂದು ಭಾಷೆಕೊಟ್ಟಿದ್ದರೆ, ನೀವು ಪಡೆದಿರುವ ಸಹಾಯದ ಬದಲಿಗೆ ಆ ಭಾಷೆಯನ್ನು ಈಡೇರಿಸಬೇಕಾಗುತ್ತದೆ. ನೀವು ಈಡೇರಿಸದಿದ್ದರೆ ದೇವತೆ ಅಸಂತುಷ್ಟಳಾಗುತ್ತಾಳೆ, ಕೆಲವು ದೇವತೆಗಳು ಕೋಪಗೊಂಡು ನಿಮ್ಮನ್ನು ಶಿಕ್ಷಿಸುತ್ತಾರೆ.

**ಪ್ರ: ಅಹಂ ಹೇಗೆ ಸ್ನೇಹಿತನಾಗಬಲ್ಲುದು? ಒಬ್ಬ ಸ್ನೇಹಿತನಾಗಿ ಅದು ಏನು ಮಾಡುತ್ತದೆ?**

ಉ: ಅಹಂ ಒಬ್ಬ ಸ್ನೇಹಿತ. ಅದು ಆತ್ಮಸಾಕ್ಷಿಯ ತರಹ ಕೆಲಸ ಮಾಡದಿರಬಹುದು. ಆದರೆ ಅನೇಕ ವೇಳೆ ಈ ಅಹಂ ನಮ್ಮನ್ನು ಎಚ್ಚರಿಸುತ್ತದೆ ಮತ್ತು ನಮಗೆ ಸಲಹೆ ನೀಡುತ್ತದೆ. ನಾವು ಅದನ್ನು ಅಲಕ್ಷಿಸುತ್ತೇವೆ. ವಾಸ್ತವದಲ್ಲಿ ನಾವು ಈ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಆದ್ದರಿಂದ ಅಹಂ ಅನ್ನು ಎಂದಿಗೂ ದೂಷಿಸಬೇಡಿ.

**ಪ್ರ: ಸ್ನೇಹಿತನಾಗಿಯಲ್ಲದಿದ್ದರೂ ಬೇರೆ ರೀತಿಯಲ್ಲಿ ಅಹಂ ನಮಗೆ ಆಧ್ಯಾತ್ಮಿಕ ಮಾರ್ಗದರ್ಶನ ನೀಡಬಲ್ಲುದೆ?**

ಉ: ಹೌದು, ಅದು ನೀಡಬಲ್ಲುದು, ನೀಡುತ್ತದೆ. ಅಹಂನ ವಿವೇಕ ಅಷ್ಟು ದೊಡ್ಡದಿಲ್ಲದಿರಬಹುದು, ಆದರೆ ನಮ್ಮನ್ನು ಮಾರ್ಗದರ್ಶಿಸುವಷ್ಟು ವಿವೇಕವನ್ನು ಅದು ಹೊಂದಿದೆ. ಆದರೂ ಮಾರ್ಗದರ್ಶನ ಅಥವಾ ಎಚ್ಚರಿಕೆಯನ್ನು ಪಡೆದಾಗಲೆಲ್ಲ, ನಾವದನ್ನು ತಿರಸ್ಕರಿಸುತ್ತೇವೆ.


**ಪ್ರ: ಬೆಳಕನ್ನು ಅನುಭವಿಸಲು ಸಾಧ್ಯವಾಗುತ್ತಿಲ್ಲ. ಏನಾದರೂ ಸಲಹೆಗಳಿವೆಯೇ?**

ಉ: ನೀವು ಬೆಳಕನ್ನು ಪ್ರೀತಿಸಿದಾಗ, ನಿಮಗೆ ಬೆಳಕಿನ ಅನುಭವವಾಗುತ್ತದೆ. ಯಾವ ತಂತ್ರದ ಬಗ್ಗೆಯೂ ಯೋಚಿಸಬೇಡಿ. ತಂತ್ರವು, ಸ್ವತಃ ದೇವರೇ ಆದ ಬೆಳಕನ್ನು ಅನುಭವಿಸಲು ಕರೆದುಕೊಂಡು ಹೋಗುವಷ್ಟು ದೊಡ್ಡ ವಾಹನವಲ್ಲ. ■


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

RNI. No. KARKAN/2003/13739 Registered Postal Regn. No. KRNA/BGE-1124/2014-2016
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



**ಗುರೂಜಿ ಕೃಷ್ಣಾನಂದ (1939 - 2012)**

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

**ಸಂ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ**

ನನಗೆ ಬೆನ್ನಿನ ಕೆಳಭಾಗದಲ್ಲಿ ನಿರಂತರವಾದ ನೋವಿದ್ದು, ಅದು ನನ್ನ ದೈನಂದಿನ ಕೆಲಸಗಳಲ್ಲಿ ಮತ್ತು ಜೀವನದಲ್ಲಿ ತೊಂದರೆಯನ್ನುಂಟುಮಾಡುತ್ತಿತ್ತು. ನಾನು ರಾತ್ರಿ ಹತ್ತು ಗಂಟೆಯಲ್ಲಿ ಗುರೂಜಿ ಹಾಗೂ ಸಂತೋಷಿ ದೇವಿಯನ್ನು ಪ್ರಾರ್ಥಿಸಿ, ಸ್ವ-ಹೀಲಿಂಗ್ ಅಭ್ಯಾಸವನ್ನು ಮಾಡಿದೆ. ತಂತ್ರದ ಅಭ್ಯಾಸ ಮಾಡುತ್ತಿದ್ದಾಗ ನನ್ನ ಬೆನ್ನುಹುರಿಯ ಭಾಗವೆಲ್ಲಾ ಹೊಂಬೆಳಕಿನಿಂದ ತುಂಬಿರುವುದನ್ನು ನೋಡಿದೆ! ಅದರ ಸುತ್ತಮುತ್ತಲಿನ ಭಾಗವನ್ನು ಸಹ ಹೊಂಬೆಳಕು ಆವರಿಸಿಕೊಂಡಿತು. ಮರುದಿನದಿಂದ ನನ್ನ ನೋವು ಶೇಕಡ 99.99ರಷ್ಟು ನಿವಾರಣೆಯಾಯಿತು.

– ಸೀಮಾ ಅಲ್‌ಮೇಲ್

ನನ್ನನ್ನು ಬಿಡದೆ ತೊಂದರೆ ಕೊಡುತ್ತಿದ್ದ ಬಹುತೇಕ ಸಮಸ್ಯೆಗಳು ದೂರವಾಗಿರುವುದು ನನಗೀಗ ಅರಿವಾಗಿದೆ. ಬಿರುಗಾಳಿಯಂತೆ ಅನಿಸುತ್ತಿದ್ದ ಸುತ್ತಮುತ್ತಲಿನ ಜನರಿಂದ ಆಗುತ್ತಿದ್ದ ತೊಂದರೆ ಹಾಗೂ ಭಿನ್ನಾಭಿಪ್ರಾಯಗಳು, ಈಗ ತಂಗಾಳಿಯಂತೆ ಬೀಸಿ ದೂರವಾಗುತ್ತಿವೆ. ಗುರೂಜಿಯವರು ನನ್ನ ಕೈಯನ್ನು ಗಟ್ಟಿಯಾಗಿ ಹಿಡಿದಿದ್ದಾರೆ ಮತ್ತು ಹಿರಿಯರು ಸಮರ್ಪಕವಾಗಿ ಮಾರ್ಗದರ್ಶಿಸುತ್ತಿದ್ದಾರೆ. ಈ ಮಾರ್ಗದಲ್ಲಿ ಆಳವಾಗಿ ಬೇರೂರುತ್ತಿದ್ದೇನೆ. ಹಳೆಯ ಅಡೆತಡೆಗಳೆಲ್ಲವೂ ನಿವಾರಣೆಯಾಗಿವೆ ಮತ್ತು ಹೊಸ ಅಡೆತಡೆಗಳು ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ. ಗುರೂಜಿಯವರಿಗೆ ಮತ್ತು ಋಷಿಗಳಿಗೆ ನನ್ನ ಧನ್ಯವಾದಗಳು. ಹೊಸ ಜೀವನಕ್ಕೆ ಇದೊಂದು ಹೊಸ ಭರವಸೆಯಾಗಿದೆ.

– ಗೀತಾ ಜೋಶಿ

ದೇಹ, ಮನಸ್ಸು ಮತ್ತು ಆತ್ಮದಲ್ಲಿ ಸಕಾರಾತ್ಮಕ ಬದಲಾವಣೆಯಾಗಿದ್ದು, ಸುತ್ತಮುತ್ತ ಪ್ರಶಾಂತತೆ ಉಂಟಾಗಿದೆ. ನನ್ನ ಎಲ್ಲ ಕೆಲಸಗಳೂ ಸಕಾಲದಲ್ಲಿ ಪೂರೈಸಲ್ಪಟ್ಟು, ಎಲ್ಲಾ ತೊಂದರೆಗಳೂ ಸುಲಭವಾಗಿ ಪರಿಹರಿಸಲ್ಪಡುತ್ತಿವೆ. ಗುರೂಜಿಯವರು ಯಾವಾಗಲೂ ನನ್ನೊಡನೆಯೇ ಇರುವ ಅನುಭವವಾಗುತ್ತಿದೆ. ಈಗ ಮುಂಬರುವ ತೊಂದರೆಗಳ ಸಂಕೇತವು ಪೂರ್ವಭಾವಿಯಾಗಿ ನನಗೆ ತಿಳಿಯುತ್ತದೆ, ಹಾಗೂ ನನಗೆ ಯಾರು ಫೋನ್ ಮಾಡುವರು ಅಥವಾ ನನ್ನನ್ನು ಭೇಟಿ ಮಾಡಲು ಯಾರು ಬರುವರೆಂದು ನನಗೆ ಮೊದಲೇ ತಿಳಿಯುತ್ತದೆ. ಇವೆಲ್ಲವೂ ಗುರೂಜಿಯವರ, ಋಷಿಗಳ, ಅಮರಾಜಿಯವರ ಮತ್ತು ನಾನು ಯಾವಾಗಲೂ ಹೊಂದಿರುವ ಬೆಳಕಿನ ಅನುಗ್ರಹವಾಗಿದೆ. ಮಾನಸದಲ್ಲಿರುವ ಎಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು.

– ಸಂಧ್ಯಾ ಸಿಂಗ್

ಇತ್ತೀಚೆಗೆ ನಾವು ಹೊರದೇಶಕ್ಕೆ ಪ್ರವಾಸಕ್ಕೆಂದು ಹೋಗಿದ್ದೆವು. ಅಲ್ಲಿ ರೈಲ್ವೇ ನಿಲ್ದಾಣದಲ್ಲಿ ರೈಲು ಹತ್ತುವ ಮೊದಲು, ನಮ್ಮ ಒಂದು ಬ್ಯಾಗ್‌ಅನ್ನು ಹೋಟೆಲಿನಲ್ಲೇ ಬಿಟ್ಟು ಬಂದಿದ್ದು ತಿಳಿಯಿತು. ನಮ್ಮ ಟ್ಯಾಕ್ಸಿ ಚಾಲಕನಿಗೆ ಆ ಹೋಟೆಲ್ ಗುರುತಿಸಲಾಗಲಿಲ್ಲ! ನಾನು ಸಪ್ತಋಷಿಗಳನ್ನು ಪ್ರಾರ್ಥಿಸುತ್ತಿದ್ದಂತೆಯೇ, ಆ ಮೊದಲೇ ನಮ್ಮನ್ನು ಸ್ಟೇಷನ್‌ಗೆ ಬಿಟ್ಟಿದ್ದ ಚಾಲಕನ ಭೇಟಿಯಾಗಿ, ಅವನ ಮಾರ್ಗದರ್ಶನದಿಂದ ಹೋಟೆಲನ್ನು ಹುಡುಕಿ ನಮ್ಮ ಬ್ಯಾಗ್ ಪಡೆದು ನಿಲ್ದಾಣವನ್ನು ಸಕಾಲದಲ್ಲಿ ತಲುಪಲು ಸಾಧ್ಯವಾಯಿತು! ಸಕಾಲದಲ್ಲಿ ದೊರಕಿದ ಋಷಿಗಳ ಸಹಾಯದ ಅರಿವು ನಮಗಾಯಿತು. ಈ ಸಹಾಯ ದೊರಕದೇ ಇದ್ದಿದ್ದರೆ, ನಾವು ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತಿತ್ತು.

– ಪರಾಗ್ ಪೇತೆ

ಋಷಿಗಳು ನನಗೆ ಈ ಮಾರ್ಗಕ್ಕೆ ಸೇರಲು ಅವಕಾಶಕೊಟ್ಟಿದ್ದು ಅವರ ಕೃಪೆಯಿಂದೆನಿಸುತ್ತದೆ. ಪ್ರತಿಯೊಂದು ಕ್ಷಣವೂ ಅವರು ನನ್ನೊಡನಿದ್ದು, ನನ್ನ ಜೊತೆಗೆ ನನ್ನ ಇಡೀ ಸಂಸಾರವನ್ನೂ ರಕ್ಷಿಸುತ್ತಿದ್ದಾರೆ ಎಂಬುದು ನನಗೆ ತಿಳಿದಿದೆ. ನಮ್ಮ ಕಠಿಣ ಪರಿಸ್ಥಿತಿಗಳನ್ನು ದಾಟಲು ಭಾನುವಾರದ ವೆಬ್‌ಕಾಸ್ಟ್ ಮೂಲಕ ಮಾರ್ಗದರ್ಶಿಸುತ್ತಿರುವ ನಿಮಗೆ ವಂದನೆಗಳು.

ಗುರೂಜಿಯವರ ಜನ್ಮದಿನದಂದು ಬಿಡುಗಡೆಯಾದ 'Master-Pupil Talks - Vol 2' ಪುಸ್ತಕವನ್ನು ನಾನು ಕನಿಷ್ಠಪಕ್ಷ ಮೂರು ಬಾರಿ ಓದಿದ್ದೇನೆ. ನಾನು ಈ ಪುಸ್ತಕದೊಂದಿಗೆ ಎಷ್ಟೊಂದು ಬಾಂಧವ್ಯ ಬೆಳೆಸಿಕೊಂಡಿದ್ದೇನೆಂದರೆ, ಬೇರೆ ಪುಸ್ತಕವನ್ನು ಓದಲು ತೆಗೆಯಬೇಕೆಂದುಕೊಂಡ ಪ್ರತಿಬಾರಿಯೂ ಇದರಿಂದ ಹೊಸತೇನಾದರೂ ಕಲಿಯಬಹುದೆಂದು ಈ ಪುಸ್ತಕವನ್ನೇ ಓದುತ್ತೇನೆ.

ನಾನು ಈಗ ಅತ್ಯಂತ ಪ್ರಶಾಂತ ವ್ಯಕ್ತಿಯಾಗಿದ್ದೇನೆ, ಮತ್ತು ನನ್ನ ಅನೇಕ ಸಮಸ್ಯೆಗಳಿಗೆ ಅತಿ ಬುದ್ಧಿವಂತಿಕೆಯಿಂದ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಿದೆ. ಪ್ರತಿದಿನ ನಾನು ಬೆಳಕನ್ನು ಆರಿಸಿಕೊಂಡಿರುವುದಾಗಿ ದೃಢೀಕರಣ ಮಾಡಿಕೊಳ್ಳುತ್ತಿರುವುದರಿಂದ, ಭಯ ಎಂಬ ಪದ ನನ್ನಿಂದ ದೂರವಾಗಿದೆ. ನಾನು ಎಂದಾದರೂ ತೊಂದರೆಗೆ ಸಿಲುಕಿದರೆ ಬೆಳಕು ಯಾವಾಗಲೂ ನನಗೆ ಸಹಾಯ ಮಾಡುತ್ತದೆ.

– ನಂದಿತಾ ಪಟೇಲ್

ಕೆಲವೊಮ್ಮೆ ನಾನು ಧ್ಯಾನ ಮಾಡುವಾಗ ಒಂದು ರೀತಿಯ ಶೂನ್ಯತೆಯ ಅನುಭವವಾಗುತ್ತದೆ. ಕೆಲವು ಸಲ ಧ್ಯಾನ ಆರಂಭಿಸಿ, ನನಗೆ ಅರಿವಾಗುವುದರೊಳಗೆ ಗೊತ್ತಿಲ್ಲದಂತೆ 30-35 ನಿಮಿಷಗಳು ಕಳೆದಿರುತ್ತವೆ!

– ಸರೋಜ್ ಸವಾಲೆ

2015 ರ ಜುಲೈ 15 ರಂದು, ಎಂದಿನ ಆಧ್ಯಾತ್ಮಿಕ ಆಚರಣೆಯ ಕ್ರಮವನ್ನು ಅಭ್ಯಾಸಮಾಡದೆಯೇ ಧ್ಯಾನದ ಸಂಪೂರ್ಣ 24 ನಿಮಿಷಗಳವರೆಗೆ ನೀಲಿಮಿಶ್ರಿತ ಬಿಳಿಯ ಬೆಳಕಿನ ಅನುಭವವಾಯಿತು. ದೇಹ, ಮನಸ್ಸು ಮತ್ತು ಬುದ್ಧಿಗಳು ನಿಶ್ಚಲವಾದಾಗ ಒಂದು ಕ್ಷಣ ನನಗೆ ಸಂಪೂರ್ಣ ನಿಶ್ಚಲತೆಯ ಅನುಭವವಾಯಿತು. ಸಂಪೂರ್ಣ ನಿಶ್ಚಲತೆಯಿದ್ದಾಗ ನಾನು ಆ ಸ್ಥಿತಿಯಲ್ಲಿರುವ ಅರಿವು ಕೂಡಾ ನನಗಿತ್ತು.

– ಶ್ರೀದೇವಿ ಎಸ್.ವಿ.ಕೆ.

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ